ವಿಜಯಪುರ | ಸಂಪುಟ 02 | ಸಂಚಿಕೆ 61 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ


Editor: Indushekhar Manur

editor.udayarashmi@gmail.com

RNI NO: KARKAN/2023/86203

ಬುಧವಾರ, ಏಪ್ರಿಲ್ 24, 2024

“ರಾಜ್ಯ ಕೃಷಿ ಸಚಿವರು, ಸಿಎಂ ದೆಹಲಿಗೆ ಹೋಗಿ ಕೈಮುಗಿದು ಬರ ಪರಿಹಾರ ಕೇಳಿದರೂ ಪ್ರಧಾನಿ ಹಣ ಬಿಡುಗಡೆ ಮಾಡಿಲ್ಲ. ಅವರು ಎಲ್ಲವನ್ನೂ ಖಾಸಗೀಕರಣ ಮಾಡುತ್ತಿದ್ದು, ಮುಂದೆ ನಮ್ಮನ್ನು, ನಿಮ್ಮನ್ನು ಸಹ ಮಾರಾಟ ಮಾಡಬಹುದು.”




– ಶಿವಾನಂದ ಎಸ್. ಪಾಟೀಲ

ಜವಳಿ, ಸಕ್ಕರೆ ಮತ್ತು ಕಬ್ಬು ಅಭಿವೃದ್ಧಿ & ಎಪಿಎಂಸಿ ಸಚಿವರು

### ತಪ್ಪುದಾರಿಗೆಳೆವ ಜಾಹೀರಾತುಗಳನ್ನು ಎದುರಿಸಲು ಸಕ್ರಿಯರಾಗಿರಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಸೂಚನೆ

# ತಪ್ಪುದಾರಿಗೆಳೆವ ಜಾಹೀರಾತುಗಳ ವಿರುದ್ಧ ಸುಪ್ರೀಂ ಕಿಡಿ!

ನವದೆಹಲಿ: “ಸಾರ್ವಜನಿಕರ ಮೇಲೆ ಸವಾರಿ ಮಾಡಲು ನಾವು ಬಿಡುವುದಿಲ್ಲ” ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದ್ದು, ತಪ್ಪುದಾರಿಗೆಳೆಯುವ ಜಾಹೀರಾತುಗಳನ್ನು ಎದುರಿಸಲು ತಾವು ಸಕ್ರಿಯರಾಗಿರಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಸೂಚನೆ ನೀಡಿದೆ.

1945ರ ಡ್ರಗ್ಸ್ ಮತ್ತು ಕಾಸ್ಮೆಟಿ-ಕ್ಸ್ ನಿಯಮಗಳು 170ರ ನಿಯಮದ ಅಡಿಯಲ್ಲಿ ಯಾವುದೇ ಕ್ರಮವನ್ನು ಪ್ರಾರಂಭಿಸಬಾರದು ಅಥವಾ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಾರದು ಎಂದು ಆಯುಷ್ ಸಚಿವಾಲಯವು ಆಗಸ್ಟ್ 2023 ರ ಪತ್ರದ ಬಗ್ಗೆ ಕೇಂದ್ರವನ್ನು ಪ್ರಶ್ನಿಸಿದಾಗ, ಸುಪ್ರೀಂ ಕೋರ್ಟ್ ಈ ಬಗ್ಗೆ ಭಾರತೀಯ ವೈದ್ಯಕೀಯ ಸಂಘವನ್ನು (ಐಎಂಎ) ತರಾಟೆಗೆ ತೆಗೆದುಕೊಂಡಿತು.

ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರ ಪೀಠ, ಪತಂಜಲಿ ಆಯುರ್ವೇದ್ ಲಿಮಿಟೆಡ್‌ನ ತಪ್ಪುದಾರಿಗೆಳೆಯುವ ಜಾಹೀರಾತುಗಳಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸುವಾಗ, ಇತರ ಹಲವಾರು ಫಾಸ್ಟ್ ಮೂವಿಂಗ್ ಗ್ರಾಹಕ ಸರಕು (ಎಫ್‌ಎಂಸಿಜಿ) ಕಂಪನಿಗಳು ಆ ಮಾರ್ಗದಲ್ಲಿ ಸಾಗುತ್ತಿವೆ, ಕೇಂದ್ರವು



ಏನು ಈ ಬಗ್ಗೆ ಮಾಡಿದೆ ಎಂಬ ಬಗ್ಗೆ ಪ್ರತಿಕ್ರಿಯಿಸಬೇಕು ಎಂದು ಹೇಳಿದೆ.

“ಸಾರ್ವಜನಿಕರ ಮೇಲೆ ಸವಾರಿ ಮಾಡಲು ನಾವು ಬಿಡುವುದಿಲ್ಲ” ಎಂದು ಪೀಠವು ಗಮನಿಸಿತು. “ಇದು (ತಪ್ಪಿಸುವ ಜಾಹೀರಾತುಗಳು) ಸಂಭವಿಸುತ್ತಿದ್ದರೆ, ಭಾರತ ಒಕ್ಕೂಟವು ಸ್ವತಃ ಸಕ್ರಿಯಗೊಳ್ಳುವ ಅಗತ್ಯವಿದೆ ಮತ್ತು ರಾಜ್ಯ ಪರವಾನಗಿ ಪ್ರಾಧಿಕಾರಗಳು ಕೂಡ ಕೆಲಸ ಮಾಡಬೇಕಾಗಿದೆ” ಎಂದರು.

“ನೀವು ಕೇವಲ ನಿಮ್ಮ ಭುಜಗಳನ್ನು ಹಿಸುಕಿಕೊಳ್ಳಬಾರದು ಮತ್ತು ನಾನು ದೂರನ್ನು ರಾಜ್ಯ ಪ್ರಾಧಿಕಾರಕ್ಕೆ ತಲುಪಿಸಿದ್ದೇನೆ, ಅವರು ಏನು ಮಾಡುತ್ತಿದ್ದಾರೆ ಎಂಬುದನ್ನು ಅವರೇ ಹೇಳಬೇಕು” ಎಂದು ಪೀಠ ಹೇಳಿದೆ.

“ವೈದ್ಯಕೀಯ ಸಂಘವು ಪತಂಜಲಿಯತ್ತ ಬೆರಳು ತೋರಿಸುತ್ತಿದ್ದರೆ, ಉಳಿದ ನಾಲ್ಕು ಬೆರಳುಗಳು ನಿಮ್ಮತ್ತ (ಐಎಂಎ) ತೋರಿಸುತ್ತಿವೆ” ಎಂದು ಐಎಂಎ ವಕೀಲರಿಗೆ ಪೀಠ ಹೇಳಿದೆ. “ಎಫ್‌ಎಂಸಿಜಿಗಳು ಇವೆ ಎಂಬುದು ಕೇವಲ ಆಗುವುದಿಲ್ಲ. ನೀವು ಮತ್ತು ನಿಮ್ಮ ಸದಸ್ಯರು ಶಿಫಾರಸುಗಳ ಬಲದ ಮೇಲೆ ಔಷಧಿಗಳನ್ನು ಶಿಫಾರಸು ಮಾಡುತ್ತಿದ್ದೀರಿ, ಇದಕ್ಕಾಗಿ ನಾವು ಅರ್ಥಮಾಡಿಕೊಂಡದ್ದ-ರಿಂದ ಮೌಲ್ಯಯುತವಾದ ಪರಿಗಣನೆ ಇದೆ” ಎಂದು ಪೀಠವು ಹೇಳಿತು.

ಕಳೆದ ವರ್ಷ ಆಗಸ್ಟ್‌ನಲ್ಲಿ ಆಯುಷ್ ಸಚಿವಾಲಯವು ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಪರವಾನಗಿ ಪ್ರಾಧಿಕಾರ ಮತ್ತು ಆಯುಷ್‌ನ ಔಷಧ ನಿಯಂತ್ರಕರಿಗೆ ನೀಡಿದ ಪತ್ರದ ಬಗ್ಗೆ ಕೇಂದ್ರದಿಂದ ಪೀಠವು ಪ್ರತಿಕ್ರಿಯೆ ಕೋರಿದೆ.

### ರಾಜ ನುಡಿ

ಕೊಲ್ಲುವುದಾದರೆ ಕರುಣೆಯಿಂದ ಕಣ್ಣಲ್ಲೇ ಕೊಲ್ಲು. ಮುಚ್ಚುವುದಾದರೆ ಮಂದಹಾಸದ ನಗುವಲ್ಲೇ ಮುಚ್ಚಿಬಿಡು. ಸಂವೇದನಾ ಶೀಲತೆ ಸಂಸ್ಕಾರದಲ್ಲಿದೆ. ದ್ವೇಷ, ಹಠ, ದುರ್ವತ್ರನೆ ನಿನ್ನದೇ ಮನಸಿನ ಸಂತಾನ ಮರೆಯದಿರು. ಸಮಾಜಕ್ಕೆ ನಿನ್ನ ಕೆಟ್ಟ ಸಂಸ್ಕಾರದ ಪರಿಚಯ ಮಾಡದಿರು ಮನುಜ. ಆಗ ಮಾತ್ರ ಆಗುವಿ ನೀ ಅಗ್ರಜ

–ಡಾ. ರಾಜಶೇಖರ ನಾಗೂರ

### ಮುಗಿಲುಮುಟ್ಟಿದ ಹರ್ಷೋದ್ಗಾರ । ಭಕ್ತರಿಂದ ದೀಡ ನಮಸ್ಕಾರ

# ಕಣ್ಮನ ಸೆಳೆದ ಗೋಲಗೇರಿ ಗೊಲ್ಲಾಳೇಶ್ವರ ರಥೋತ್ಸವ

ಉದಯರಶ್ಮಿ ನ್ಯೂಸ್

– ಮಲ್ಲು ಎನ್. ಕೆಂಭಾವಿ

ಬ್ರಹ್ಮದೇವನಮಡು: ಮುಗಿಲು ಮುಟ್ಟಿದ ಹರ್ಷೋದ್ಗಾರ, ಎಲ್ಲಿ ನೋಡಿದರೂ ಜನಸಾಗರ, ಗೋಧೂಳಿ ಮುಹೂರ್ತದಲ್ಲಿ ವೈಭವದ ರಥೋತ್ಸವ, ಹಣ್ಣು ಸಮರ್ಪಿಸಿ ಧನ್ಯತೆ ಮೆರೆದ ಭಕ್ತರು..

ಸಿಂದಗಿ ತಾಲೂಕಿನ ಸುಕ್ಷೇತ್ರ ಗೋಲಗೇರಿಯ ಗೊಲ್ಲಾಳೇಶ್ವರದಲ್ಲಿ ಮಂಗಳವಾರ ಸಂಜೆ ಕಂಡುಬಂದ ದೃಶ್ಯಗಳಿವು.

ಚೈತ್ರ ಪೌರ್ಣಿಮೆ ನಿಮಿತ್ತ ಪ್ರತಿ ವರ್ಷದಂತೆ ಅದ್ದೂರಿ ರಥೋತ್ಸವ ನಡೆಯಿತು. ಲಕ್ಷಾಂತರ ಭಕ್ತರು ಬೆಳಗ್ಗೆಯಿಂದ ಕ್ಷೇತ್ರಕ್ಕೆ ಆಗಮಿಸಿ ದರ್ಶನ ಪಡೆದರು.

ಸುತ್ತಲಿನ 20ಕ್ಕೂ ಹೆಚ್ಚು ಹಳ್ಳಿಗಳ ಭಕ್ತರು ಪಾದಯಾತ್ರೆ ಮೂಲಕ ನಸುಕಿನಲ್ಲೇ ಕ್ಷೇತ್ರಕ್ಕೆ ಆಗಮಿಸಿದರು. ಸೂರ್ಯೋದಯ ಸಂದರ್ಭದಲ್ಲಿ ಸಾವಿರಾರು ಭಕ್ತರು ದೀಡ ನಮಸ್ಕಾರ ಹಾಕುವ ಮೂಲಕ ಹರಕೆ ತೀರಿಸಿದರು. ಧರ್ಮದರ್ಶಿ ವರಪುತ್ರ ಹೊಳೆಪ್ಪ ಶರಣರು ದೇವರಮನಿ ಹಾಗೂ ಸಿದ್ದರಾಮ ದೇವರಮನಿ ಅವರ ನೇತೃತ್ವದಲ್ಲಿ ಬೆಳಗ್ಗೆ ರುದ್ರಾಭಿಷೇಕ ಹಾಗೂ ವಿಶೇಷ ಅಲಂಕಾರ ಪೂಜೆ ನೆರವೇರಿಸಲಾಯಿತು. ಭಕ್ತರು ಸಂಜೆವರೆಗೆ ಸರದಿಯಲ್ಲಿ ನಿಂತು ಗೊಲ್ಲಾಳೇಶ್ವರನ ದರ್ಶನ ಪಡೆದರು. ಸಂಜೆ ಪಂಚಲೋಹದ ಕಲಶಾರೋಹಣ, ಛೂಚಕ್ರ ಕೊಡೆ ಏರಿಸಿದ ನಂತರ ಸಕಲ ವಾದ್ಯ ವೈಭವಗಳೊಂದಿಗೆ ಗೊಲ್ಲಾಳೇಶ್ವರನ ಭವ್ಯ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ದೇವಸ್ಥಾನದಿಂದ ಪಾದಗಟ್ಟೆವರೆಗೆ ರಥ ಸಾಗುತ್ತಿದ್ದಂತೆ ಭಕ್ತರ ಜಯಘೋಷ ಮುಗಿಲು ಮುಟ್ಟಿತು. ಭಕ್ತರು ಉತ್ತತ್ತಿ, ಹಣ್ಣು, ಕಾಯಿ ಕರ್ಪೂರ ಸಮರ್ಪಿಸಿದರು. ಆಂಧ್ರ, ಮಹಾರಾಷ್ಟ್ರ ಸೇರಿದಂತೆ ರಾಜ್ಯದ ವಿಜಯಪುರ, ಯಾದಗಿರಿ, ಕಲಬುರಗಿ ಜಿಲ್ಲೆಯಿಂದ ಉತ್ಸವಕ್ಕೆ ಭಕ್ತಸಾಗರವೇ ಹರಿದುಬಂದಿತ್ತು. ದೇವಸ್ಥಾನವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.

ಸಿಂದಗಿ ಸಿಪಿಐ ನಾನಾಗೌಡ ಪೋಲಿಸ್ ಪಾಟೀಲ, ಕಲಕೇರಿ ಠಾಣೆ ಪಿಎಸೈ ರೋಹಿಣಿ ಪಾಟೀಲ, ಸಿಂದಗಿ ಪಿಎಸೈ ಭೀಮಪ್ಪ ರಬಕವಿ, ಸಿಂದಗಿ, ಕಲಕೇರಿ ಠಾಣೆ ಸಿಬ್ಬಂದಿ ಸೂಕ್ತ ಬಂದೋ ಬಸ್ತ್ ಒದಗಿಸಿದ್ದರು.



#### ಮಹಾಪ್ರಸಾದ ವ್ಯವಸ್ಥೆ

ಮಧ್ಯಾಹ್ನ ದೇವಸ್ಥಾನದಲ್ಲಿ ಮಹಾಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಹತ್ತು ವರ್ಷಗಳಿಂದ ಇಬ್ರಾಹಿಂಪೂರದ ಸುಭಾಸಗೌಡ ಪಾಟೀಲ ಹಾಗೂ ಕುಟುಂಬದವರು ರಥೋತ್ಸವ ದಿನದಂದು ಪ್ರಸಾದ ವ್ಯವಸ್ಥೆ ಕಲ್ಪಿಸುತ್ತಿದ್ದು, ಈ ವರ್ಷವೂ 20 ಸಾವಿರಕ್ಕೂ ಹೆಚ್ಚು ಜನ ಪ್ರಸಾದ ಸ್ವೀಕರಿಸಿದರು.

# ನೇಹಾ ಹಿರೇಮಠ ಹತ್ಯೆ ಖಂಡಿಸಿ ವಿಹಿಂಪ ಪ್ರತಿಭಟನೆ

ಉದಯರಶ್ಮಿ ನ್ಯೂಸ್


ವಿಜಯಪುರ: ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆಯನ್ನು ಖಂಡಿಸಿದ ಜಾಗೃತಿ ನಾಗರಿಕ ವೇದಿಕೆ ಹಾಗೂ ವಿಶ್ವ ಹಿಂದು ಪರಿಷತ್ ಜಿಲ್ಲಾ ಘಟಕದ ಕಾರ್ಯಕರ್ತರು ಹತ್ಯೆ ಆರೋಪಿಯನ್ನು ಗಲ್ಲಿಗೇರಿಸಬೇಕೆಂದು ಆಗ್ರಹಿಸಿ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ವಿಹಿಂಪ ವಿಭಾಗ ಪ್ರಮುಖ ಶ್ರೀಮಂತ ದುದ್ದಗಿ, ಜಿಲ್ಲಾ ಕಾರ್ಯದರ್ಶಿ ಸಿದ್ದು ಹೂಗಾರ್, ಪ್ರಾಂತ ಪ್ರಮುಖ ಶ್ರೀಮತಿ ಮಾಯಕ್ಕ ಚೌದರಿ, ಮಂಚಾಲೇಶ್ವರಿ ಹಾಗೂ ಮುಖಂಡ ರಾಜು ಗಚ್ಚಿನಮಠ ಮಾತನಾಡಿ, ಗೃಹ ಸಚಿವರು ತನಿಖೆಗೂ ಮೊದಲೇ ಇದು ವೈಯಕ್ತಿಕ ಪ್ರೀತಿಗಾಗಿ ನಡೆದ ಕೊಲೆ ಎಂದು ಹಗುರವಾಗಿ ಹೇಳಿಕೆ ನೀಡಿ ತನಿಖೆ ದಾರಿಯನ್ನು ತಪ್ಪಿಸುವ ಹುನ್ನಾರ ಮತ್ತು ಮುಸ್ಲಿಂ ಓಟ್ ಬ್ಯಾಂಕ್ ಒಲೈಕೆಗೆ ನಾಂದಿ ಹಾಡಿದ್ದಾರೆ. ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿದೆ. ತಕ್ಷಣ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಿ ಹತ್ಯೆಗೆದ ಹಂತಕ ಫಯಾಜ್ನನ್ನು ಗಲ್ಲಿಗೇರಿಸಬೇಕು. ವಿದ್ಯಾರ್ಥಿನಿಯರಲ್ಲಿ ಅಡಗಿದ ಭಯವನ್ನು ದೂರಗೊಳಿಸಿ ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಹಾಗೆ ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.




ಈ ಸಂದರ್ಭದಲ್ಲಿ ಪ್ರಾಂತ ಪ್ರಮುಖ ಸುನಿಲ್ ಭೈರವಾಡಗಿ, ಚಂದ್ರಶೇಖರ್ ಹರನಾಳ, ಮಹೇಶ ಸಾಲೋಟಗಿ, ಅಶ್ವಿನ್ ಪಟ್ಟಣಶೆಟ್ಟಿ, ಶಿವಾನಂದ ನಾಗರಾಳ, ಅರ್ಜುನ್ ಬಡಚಿ, ಈರಣ್ಣ ಹಳ್ಳಿ, ಗೀತಾ ಅಂಗಡಿ, ಜಯಶ್ರೀ ಅಫ್ಜಲ್ಪುರ್, ಸುನೀಲ ಭೈರವಾಡಗಿ ಮುಂತಾದವರು ಉಪಸ್ಥಿತರಿದ್ದರು.

### ವಚನ ಚಿಂತನ 364



*ಬಯಲ ಹೊಲಬಿನಲ್ಲಿ ಹುಟ್ಟಿದ ಬೆಳಗು ಶಿಲೆ ಲೋಹ ಕಂಚುಗಳಲ್ಲಿ ಬೆಳಗಿನ ಕಳೆ ತೋರುವಂತೆ,*
*ಎನ್ನ ಕರತಳದಲ್ಲಿ ಸ್ವಯಂಭುವಪ್ಪ ಲಿಂಗವೆ, ನಿನ್ನ ಕಳೆ ಎನ್ನ ಕಂಗಳಿಗೆ ಹೊಲಬಾಗಿ ಏಕೆ ತೋರದು ?*
*ಅದು ಎನ್ನದು ಜಡವೊ ನಿನ್ನಯ ಪ್ರಕೃತಿಯೊ ? ಅದು ನಿನ್ನ ಬಿನ್ನಾಣದ ಗನ್ನದ ಭೇದವೊ ? ಎನ್ನಲ್ಲಿ ನೀನಿಲ್ಲದ ಕಾರಣವೊ ? ನಾ ನಿನ್ನಲ್ಲಿ ಸುಗುಣವಿಲ್ಲದ ಕಾರಣವೊ? ಎನಗೆ ಭಿನ್ನನಾದೆ ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ, ಎನ್ನಲ್ಲಿ ನೀ ಸನ್ನದ್ಧನಾಗಿರು.*

ಪತಿಯ ವೈರಾಗ್ಯಕ್ಕೆ ಬೆಂಬಲವಾಗಿ ನಿಂತು ರಾಜವೈಭೋಗವನ್ನು ತ್ಯಾಗ ಮಾಡಿ ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದ ಮೊಳಗಿ ಮಹಾದೇವಿಯವರ ಅನುಭಾವದ ಉತ್ತುಂಗ ಸ್ಥಿತಿಯನ್ನು ಪರಿಚಯಿಸುವ ವಚನವಿದು, ಅಂಗವೇ ಲಿಂಗವೆಂದು ಹೇಳುವುದಾದರೆ, ಲಿಂಗದಿಂದ ಬೆಳಗು ಹೊರಹೊಮ್ಮುವಂತೆ ಅಂಗದಿಂದ ಬೆಳಗು ಹೊರ ಹೊಮ್ಮದಿರಲು ಇರುವ ಕಾರಣವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಇಲ್ಲಿ ದೇವರನ್ನೇ ಪ್ರಶ್ನಿಸಿದ್ದಾರೆ. ತಮ್ಮೊಂದಿಗೆ ಕಾಶ್ಮೀರದಿಂದ ಬಂದ ಪತಿಯ ಸಹೋದರಿ ವೀರವೈರಾಗ್ಯನಿಧಿ ಬೊಂತಾದೇವಿಯವರೊಂದಿ ಗೆ ನಡೆದ ಸಂವಾದ ರೂಪದ ಭಾಗವಾಗಿ ಈ ವಚನವನ್ನು ಕಾಣಬಹುದು, “ಘಟದೊಳಗಣ ಬಯಲು,ಮಠದೊಳಗಣ ಬಯಲು, ಬಯಲು ಬಯಲು ಬಯಲು? ತಾನೆಲ್ಲಾ ಬಯಲು, ಬಿಡಾಡಿ ಬಯಲು.” ಘಟ(–ಅಂಗ) ಮತ್ತು ಮಠ(ಮಹಾಲಿಂಗ) ದೊಳಗಿರುವುದು ಒಂದೇ ಬಯಲಾದರೆ ಅಲ್ಲಿಂದ ಹುಟ್ಟುವ ಬೆಳಗು ಶಿಲೆ ಕಂಚುಲೋಹಗಳಲ್ಲಿ ಕಳೆತೋರುತ್ತದೆ ಆದರೆ ತಮ್ಮಲ್ಲಿ ಆ ಕಳೆ ತೋರುತ್ತಿಲ್ಲವೇಕೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

### ವಿಜಯಪುರದ ಎಪಿಎಂಸಿಯಲ್ಲಿ ನಡೆದ ವ್ಯಾಪಾರಿಗಳ & ವಿವಿಧ ಸಂಘಗಳ ಪ್ರತಿನಿಧಿಗಳ ಸಭೆ

# ಕಾಂಗ್ರೆಸ್ ಸದಾ ಮಾರುಕಟ್ಟೆ ವ್ಯಾಪಾರಿಗಳ ಪರ :ಎಂ.ಬಿ.ಪಾಟೀಲ

ಉದಯರಶ್ಮಿ ನ್ಯೂಸ್

ವಿಜಯಪುರ: ಕಾಂಗ್ರೆಸ್ ಪಕ್ಷ ಯಾವತ್ತೂ ಆರ್ಥಿಕತೆ ಮೂಲವಾದ ವ್ಯಾಪಾರ–ವಹಿವಾಟಿನ ಪರವಿರುವುದರಿಂದ ನಾವು ವ್ಯಾಪಾರಿಗಳ ಹಿತ ಕಾಪಾಡುತ್ತ ಬಂದಿದ್ದೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಲೋಕಸಭೆ ಕಾಂಗ್ರೆಸ್ ಅಭ್ಯರ್ಥಿ ಪ್ರೊ.ರಾಜು ಆಲಗೂರ ಅವರ ಪರವಾಗಿ ಮತಯಾಚಿಸಿ, ನಗರದ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ನಡೆದ ವ್ಯಾಪಾರಿಗಳ ಹಾಗೂ ಎಲ್ಲ ಸಂಘಗಳ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದರು.

ದೇಶ ಈ ಹತ್ತು ವರ್ಷಗಳಲ್ಲಿ ಏನೇನು ಅನುಭವಿಸಿದೆ ನಿಮಗೆ ಗೊತ್ತಿದೆ. ಎಲ್ಲದರ ಮೇಲೆ ಜಿಎಸ್‌ಟಿ ದಾಳಿಯನ್ನು ವ್ಯಾಪಾರಿಗಳಾದ ನೀವು ಅನುಭವಿಸಿದ್ದೀರಿ. ಮನಮೋಹನ್ ಸಿಂಗ್ ಅವರು ಇದ್ದಾಗ ದೇಶದ ಆರ್ಥಿಕ ಸ್ಥಿತಿ ಅತ್ಯಂತ ಬಲಿಷ್ಠವಾಗಿತ್ತು. ಆದರೆ ಮೋದಿ ಆಡಳಿತ ಬಂದ ಮೇಲೆ ಅದು ಕುಸಿಯುತ್ತ ಬಂದಿದೆ. ಇದರ ನೇರ ಪರಿಣಾಮವನ್ನು ನೀವು ಉಂಡಿದ್ದೀರಿ ಎಂದು ವಿವರಿಸಿದರು.

ಚುನಾವಣಾ ಬಾಂಡ್ ಮೂಲಕ ಅನಧಿಕೃತವಾಗಿ ಹಣ ಎತ್ತಲಾಗಿದೆ. ಹೆದರಿಸಿ ಬೆದರಿಸಿ ವ್ಯಾಪಾರಿಗಳ, ಉದ್ಯೋಗಪತಿಗಳಿಂದ ವಸೂಲಿ ಮಾಡಲಾಗಿದೆ. ಇದೆಲ್ಲವನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಜಿಲ್ಲೆಯ ತೋಟಗಾರಿಕೆ, ಎಲ್ಲ ಬೆಳೆಗಳ ಹಿತ, ಅಭಿವೃದ್ಧಿಗೆ ಹಾಗೂ ನಿಮ್ಮ ವ್ಯಾಪಾರ–ವಹಿವಾಟಿನ ಉಳಿವಿಗಾಗಿ ಯೋಚಿಸಿ ಮತ ನೀಡಿ. ಶರದ್ ಪವಾರ ಅವರ ಬಾರಾಮತಿಯಂತೆ ವಿಜಯಪುರವನ್ನು ಬೆಳೆಸೋಣ ಎಂದು ಹೇಳಿದರು.



ಮಾರುಕಟ್ಟೆ ಹಾಗೂ ಜವಳಿ ಸಚಿವ ಶಿವಾನಂದ ಪಾಟೀಲ ಮಾತನಾಡಿ,

ಎಪಿಎಂಸಿಗಾಗಿ ಕೇಂದ್ರ ಸರಕಾರವನ್ನು ಮೀರಿ ನಿಮ್ಮೊಂದಿಗೆ ನಿಂತಿದ್ದು ರಾಜ್ಯ ಸರ್ಕಾರ. ಇದರಿಂದ ನಿಮಗೆ ಬಹುಪಯೋಗವಾಗಿದೆ. ಯಾರು ಯಾರೋ ಬಂದು ನಮ್ಮನ್ನು ಬೈದು ಮತ ಕೇಳುವವರ ಮಾತು ಕೇಳಬೇಡಿ. ಸದ್ಯದ ಸಂಸದನಿಗೆ ಪದೇ ಪದೇ ಅಧಿಕಾರ ನೀಡಿದರೂ ನಿಮ್ಮ ಹಣೆ ಬರಹ ಬದಲಾಗಿಲ್ಲ. ದೇಶವನ್ನು ಮೋದಿ–ಶಾ ಮಾತ್ರ ಆಳುತ್ತಿದ್ದಾರೆ. ನೀವೆಲ್ಲ ತಿಳಿದವರು. ಹಮಾಲರು ಊಟಕ್ಕೂ ಪರದಾಡುತ್ತಿದ್ದಾರೆ. ಮೋದಿ ದೊಡ್ಡವರ ಪರ ಇದ್ದಾರೆ. ಸಣ್ಣ ವ್ಯಾಪಾರಿಗಳ ಕಾಳಜಿ ಅವರಿಗಿಲ್ಲ ಎಂದರು.

ಇಲ್ಲಿಂದ ಸರಿಯಾದ ರೈಲು, ವಿಮಾನಯಾನ ಇಲ್ಲ. ಆಲಗೂರ್ ದೂರ ದೃಷ್ಟಿ ಇಟ್ಟುಕೊಂಡಿದ್ದಾರೆ. ರಾಜ್ಯ ಸರಕಾರವೂ ನಿಮ್ಮೊಂದಿಗೆ ಇದೆ. ಈ ಸಲ ಬದಲಾವಣೆ ತನ್ನಿ ಎಂದು ಕೋರಿದರು.

ಶಾಸಕ ಯಶವಂತರಾಯಗೌಡ ಪಾಟೀಲ ಮಾತನಾಡಿ, ಈ ಮಾರುಕಟ್ಟೆಯ ಗತ ವೈಭವವನ್ನು ಮತ್ತೆ ತರಬೇಕಿದೆ ಎಂದರು.

ಎಐಸಿಸಿ ವೀಕ್ಷಕ ಸಯೀದ್ ಬುರಾನುದ್ದೀನ ಮಾತನಾಡಿದರು.

ಶಾಸಕರಾದ ಪ್ರಕಾಶ ರಾಠೋಡ, ವಿಠ್ಠಲ ಕಟಕದೊಂಡ, ಅಶೋಕ ಮನಗೂಳಿ, ಮಾಜಿ ಶಾಸಕ ಶರಣಪ್ಪ ಸುಣಗಾರ, ಹಮೀದ್ ಮುಶ್ರೀಫ್, ನಿಗಮದ ಅಧ್ಯಕ್ಷೆ ಕಾಂತಾ ನಾಯಕ, ವೀಕ್ಷಕ ಸಯೀದ್ ಬುರಾನ್, ಡಾ. ಮಕ್ಬೂಲ್ ಬಾಗವಾನ, ಸೈಯ್ಯದ ನೂರುದ್ದೀನ್, ಸಂಘದ ಅಧ್ಯಕ್ಷ ರವೀಂದ್ರ ಬಿಜ್ಜರಗಿ, ವೈಜನಾಥ ಕರ್ಪೂರಮಠ, ಪಕ್ಷದ ಜಿಲ್ಲಾಧ್ಯಕ್ಷ ಎಂ. ಎಸ್. ಲೋಣಿ, ಗುಡ್ಡೂ ಮಹೀಂದ್ರಕರ, ಫಾರೂಖ ಬಾಗವಾನ, ಸಂಗಪ್ಪ ಹೇರಲಗಿ, ಸುರೇಶ ಗಚ್ಚಿನಕಟ್ಟಿ, ಅರುಣ ಹುಂಡೇಕಾರ ಅನೇಕರಿದ್ದರು.

### ಲೋಕಸಭಾ ಚುನಾವಣೆ ಬಹಿಷ್ಕಾರಕ್ಕೆ ಮುಂದಾದ ಮದಬಾವಿ ಎಲ್.ಟಿ–1 ಗ್ರಾಮಸ್ಥರು

# ಟಾಯರ್ ಕಾರ್ಖಾನೆ ಬಂದ್ ಮಾಡಿಸಲು ಆಗ್ರಹಿಸಿ ಪ್ರತಿಭಟನೆ

ಉದಯರಶ್ಮಿ ನ್ಯೂಸ್

ವಿಜಯಪುರ: ಸಮೀಪದ ಮದಭಾವಿ ತಾಂಡಾ ನಂ 1ರ ಹತ್ತಿರದ ಟಾಯರ್ ಕಾರ್ಖಾನೆಯನ್ನು ಬಂದ್ ಮಾಡಿಸಬೇಕು ಎಂದು ಆಗ್ರಹಿಸಿ ಮದಬಾವಿ ಎಲ್ಟಿ 1 ನಿವಾಸಿಗಳು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಚುನಾವಣಾ ಅವಧಿಯೊಳಗೆ ಕಾರ್ಖಾನೆ ಬಂದ್ ಮಾಡದಿದ್ದರೆ ಮತದಾನ ಮಾಡದೆ ಚುನಾವಣಾ ಬಹಿಷ್ಕಾರ ಹಾಕುವುದಾಗಿ ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಈ ವೇಳೆ ಗ್ರಾಮ ಪಂಚಾಯಿತಿ ಸದಸ್ಯ ಪ್ರಕಾಶ ರಾಠೋಡ ಮಾತನಾಡಿ, ಜಿಲ್ಲಾಧಿಕಾರಿಗಳು ಕೂಡಲೇ ಸಂಬಂಧಿಸಿದ ಅಧಿಕಾರಿಗಳಿಂದ ಸ್ಥಳಕ್ಕೆ ಖುದ್ದಾಗಿ ಆಗಮಿಸಿ ಪರಶೀಲನೆ ಮಾಡಿ, ವರದಿ ಪಡೆದುಕೊಂಡು ತಕ್ಷಣದಿಂದಲೇ ಆ ಕಾರ್ಖಾನೆಯನ್ನು ಬಂದ್ ಮಾಡಬೇಕು, ಇಲ್ಲವೇ ಬೇರೆಡೆಗೆ ಸ್ಥಳಾಂತರಿಸಬೇಕು, ಇದರಿಂದ ಇಲ್ಲಿಯ ಸಾಕಷ್ಟು ಮಕ್ಕಳಿಗೆ, ಮಹಿಳೆಯರಿಗೆ, ವಯೋವೃದ್ಧರಿಗೆ ಸಮಸ್ಯೆ ಉಂಟಾಗಿವೆ, ಅದರಲ್ಲಿ ಮುಖ್ಯವಾಗಿ ಗಂಟಲು ಉರಿ, ಉಸಿರಾಟದ ತೊಂದರೆ, ಹೃದಯ ಸಂಬಂಧಿ ಕಾಯಿಲೆ, ಲಕ್ವಾ ಸೇರಿದಂತೆ ಅನೇಕ ರೀತಿಯ ಸಮಸ್ಯೆ ಎದುರಿಸುವಂತಾಗಿದೆ ಎಂದರು

ಜಿಲ್ಲಾಧಿಕಾರಿಗಳ ಕಚೇರಿ ಸುತ್ತಮುತ್ತ 144 ಕಲಂ ಜಾರಿ ಇದ್ದು, ಯಾರು ಇಲ್ಲಿ ಬರಬಾರದು ಎಂದ ಪೋಲಿಸರು ಹಾಗೂ ಗ್ರಾಮಸ್ಥರ ನಡುವೆ ವಾಗ್ವಾದ ನಡೆಯಿತು. ಕೊನೆಗೆ ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ ಅವರು ಸ್ಥಳಕ್ಕೆ ಆಗಮಿಸಿ, ಈಗಾಗಲೇ ಟಾಯರ್ ಕಾರ್ಖಾನೆಗೆ ಸಂಬಂಧಿಸಿದಂತೆ ತಲಾಟಿ, ಪಿಡಿ.ಓ ಹಾಗೂ ಚುನಾವಣಾಧಿಕಾ–ರಿಗಳಿಂದ ವರದಿ ತರಿಸಿಕೊಂಡು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಪತ್ರ ಕಳುಹಿಸಲಾಗಿದೆ. ಕಾರಣ ಯಾರೂ ಚುನಾವಣಾ ಭಹಿಷ್ಕಾರ ಮಾಡಬಾರದು ಎಂದರು.



ಈ ವೇಳೆ ಗ್ರಾ ಪಂ ಸದಸ್ಯ ಪಾಂಡುರಂಗ ರಾಠೋಡ ಮಾತನಾಡಿ, ತಾಂಡಾಕ್ಕೆ ತಲಾಟಿಯವರು ಆಗಮಿಸಿ ನಮ್ಮ ಸಮಸ್ಯೆ ಕೇಳಿ, ಬಿಳಿ ಹಾಳೆಯ ಮೇಲೆ ಎಲ್ಲರ ಸಹಿ ಮಾಡಿಸಿಕೊಂಡು ಜಿಲ್ಲಾಧಿಕಾರಿಗಳಿಗೆ ತಪ್ಪು ಮಾಹಿತಿ ಕಳುಹಿಸಿದ್ದಾರೆ. ತಲಾಟಿ ಹಾಗೂ ಸರ್ಕಲ್, ಪಿ.ಡಿ.ಓ ಅವರು ಕಾರ್ಖಾನೆ ಮಾಲಿಕರಿಂದ ಹಣ ಪಡೆದು ಈ ರೀತಿ ವರ್ತಿಸಿದ್ದಾರೆ ಎಂದು ಆರೋಪಿಸಿದರು.

ಈ ವೇಳೆ ಗ್ರಾ.ಪಂ ಸದಸ್ಯ ಮೇಘ ರಾಠೋಡ, ಎಸ್.ಡಿ.ಎಂ.ಸಿ ಅಧ್ಯಕ್ಷ ಪ್ರಕಾಶ ರಾಠೋಡ, ಮಾಜಿ ಅಧ್ಯಕ್ಷ ಉತ್ತಮ ರಾಠೋಡ, ಕೀರು ಲಕ್ಕು ರಾಠೋಡ(ಕಾರಭಾರಿ), ಕ್ರೇಷ್ಣಾ ಚವ್ಹಾಣ, ಗಂಗಾರಾಮ ಚವ್ಹಾಣ, ರಮೇಶ ರಾಠೋಡ, ಗೋಪಾಲ ನಾಯಕ, ಬಾಸು ಲಚ್ಚು ರಾಠೋಡ, ಲಕ್ಷ್ಮಣ ನಾಯಕ, ಠಾಕರು ರಾಠೋಡ, ಲಚ್ಚು ಚವ್ಹಾಣ, ಧನಸಿಂಗ ರಾಠೋಡ, ಶಾಂತಾಭಾಯಿ ರಾಠೋಡ, ಚಾಂದಾಭಾಯಿ ಚವ್ಹಾಣ, ದೇವಿಭಾಯಿ ಜಾಧವ, ರೂಪ್ಲಾಭಾಯಿ ಚವ್ಹಾಣ, ಸಕ್ಕುಭಾಯಿ ಚವ್ಹಾಣ, ಜಮ್ಲಾಭಾಯಿ ರಾಠೋಡ ಸೇರಿದಂತೆ ನೂರಾರು ಗ್ರಾಮಸ್ಥರು ಇದ್ದರು.

# ನಾಗಠಾಣದಲ್ಲಿ ಹನುಮ ಜಯಂತಿ :ವಿಶೇಷ ಪೂಜೆ



ಉದಯರಶ್ಮಿ ನ್ಯೂಸ್

ವಿಜಯಪುರ: ತಾಲೂಕಿನ ನಾಗಠಾಣ ಗ್ರಾಮದಲ್ಲಿ ಹನುಮಾನ ಜಯಂತಿ ನಿಮಿತ್ತ ಭಕ್ತರು ಮಂಗಳವಾರದಂದು ಗ್ರಾಮದ ಹನುಮಾನ ಗುಡಿಗೆ ಆಗಮಿಸಿ, ಶ್ರದ್ಧಾ, ಭಕ್ತಿಯಿಂದ ಪೂಜೆ ಸಲ್ಲಿಸಿದರು.

ಹನುಮಂತನು ಮಹಾದೇವನ ಅವತಾರವಾಗಿದ್ದು, ಅಷ್ಟ ಸಿದ್ಧಿ, ನವ ನಿಧಿ, ಶಾಶ್ವತವಾದ ಶಕ್ತಿ, ನಿಷ್ಠೆ ಮತ್ತು ಭಕ್ತಿಯ ಪ್ರತೀಕವಾಗಿದ್ದು, ಹನುಮಂತನಿಗೆ ಸಲ್ಲಿಸಿದ ಪ್ರಾರ್ಥನೆಯಿಂದ ಎಲ್ಲರ ಜೀವನದಲ್ಲಿ ಸಾಮರಸ್ಯ, ಶಕ್ತಿ ಮತ್ತು ಯಶಸ್ಸನ್ನು ತರುತ್ತಾನೆ ಎಂಬ ನಂಬಿಕೆ ಭಕ್ತರಲ್ಲಿ ಈಗಲೂ ಜನಜನಿತವಾಗಿದೆ.

ಹನುಮಂತನ ವಿಗ್ರಹಕ್ಕೆ ತುಪ್ಪದಿಂದ ಮತ್ತು ಸಾಸಿವೆ ಎಣ್ಣೆಯಿಂದ ದೀಪ ಹಚ್ಚಿ ಹನುಮನನ್ನು ಭಕ್ತಿಯಿಂದ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಲ್ಲು ಹೂಗಾರ, ನವೀನ ಗುಣಕಿ, ಪ್ರಶಾಂತ ತಳವಾರ, ಸಿದ್ದು ಕನ್ನೋಳ್ಳಿ, ರಾಜು ಹಿರೇಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮೋದಿ ಮತ್ತೆ ಪ್ರಧಾನಿಯಾಗಲು ನಾಮಪತ್ರ ಹಿಂಪಡೆದೆ :ಹುಣಶಿಕಟ್ಟಿ

ಉದಯರಶ್ಮಿ ನ್ಯೂಸ್



ವಿಜಯಪುರ: ಜವಾಬ್ದಾರಿಯುತ ಹಿರಿಯ ನಾಗರಿಕನಾಗಿ ದೇಶದ ರಕ್ಷಣೆ, ಅಭಿವೃದ್ಧಿ ನನಗೆ ಮುಖ್ಯ. ಹಾಗಾಗಿ ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ಸಂಸದ ರಮೇಶ ಜಿಗಜಿಣಗಿಯವರನ್ನು ಬೆಂಬಲಿಸಿ, ರಾಷ್ಟ್ರ ರಕ್ಷಣೆ, ಪ್ರಗತಿಗಾಗಿ ಜಗಮೆಚ್ಚಿದ ನಾಯಕ ನರೇಂದ್ರ ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡುವ ಉದ್ದೇಶದಿಂದ ಲೋಕಸಭಾ ಚುನಾವಣೆಯಲ್ಲಿ ವಿಜಯಪುರ ಲೋಕಸಭಾ ಕ್ಷೇತ್ರಕ್ಕೆ ನಾನು ಪಕ್ಷೇತರನಾಗಿ ಸಲ್ಲಿಸಿದ್ದ ನಾಮಪತ್ರವನ್ನು ಹಿಂಪಡೆದಿದ್ದೇನೆ ಎಂದು ನಿವೃತ್ತ ಡಿವೈಎಸ್ಪಿ ಸಂಗಪ್ಪ ಹುಣಶಿಕಟ್ಟಿ ಹೇಳಿದರು.

ಬಿಜೆಪಿ ಚುನಾವಣಾ ಕಾರ್ಯಾಲಯದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ನಾನು ಸುಮಾರು 30 ವರ್ಷಗಳ ಕಾಲ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದೇನೆ. ನಿವೃತ್ತಿಯ ನಂತರವೂ ಸಮಾಜಮುಖಿ ಕೆಲಸಕ್ಕೆ ತೊಡಗಿಕೊಳ್ಳಬೇಕೆಂಬ ಉದ್ದೇಶದಿಂದ ವಿಜಯಪುರ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದೆ. ಆಗ ನಮ್ಮ ಸಮುದಾಯದ ಅನೇಕ ಹಿರಿಯರು ಆಗಮಿಸಿ ಕಳೆದ ಹತ್ತು ವರ್ಷಗಳಲ್ಲಿ ಮೋದಿಯವರ ಆಡಳಿತದಲ್ಲಿ ದೇಶದಲ್ಲಾದ ಅನೇಕ ಅಭಿವೃದ್ಧಿ ಕಾರ್ಯಗಳು, ಬದಲಾವಣೆಗಳ ಬಗ್ಗೆ ಚರ್ಚಿಸಿ ಪ್ರಸ್ತುತ ಅವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡುವ ಅವಶ್ಯಕತೆ ಬಗ್ಗೆ ವಿವರಿಸಿದರು. ಅವರೆಲ್ಲಾ ಒತ್ತಾಸೆಯಂತೆ ಹಾಗೂ ನಾನು ಸಹ ಒಬ್ಬ ಜವಾಬ್ದಾರಿಯುತ ನಾಗರಿಕನಾಗಿ ಇದಕ್ಕೆ ಬೆಂಬಲ ವ್ಯಕ್ತಪಡಿಸಿ ವಿಜಯಪುರ ಮೀಸಲು ಲೋಕಸಭಾ ಕ್ಷೇತ್ರಕ್ಕೆ ಪಕ್ಷೇತರನಾಗಿ ಸಲ್ಲಿಸಿದ್ದ ನಾಮಪತ್ರ ಹಿಂಪಡೆದಿದ್ದೇನೆ ಎಂದರು.

ಕಾಂಗ್ರೇಸ್ ಪಕ್ಷದಲ್ಲಿ ಸಂಸ್ಕಾರವಿಲ್ಲ, ನಾಯಕರಲ್ಲಿ ಅಧಿಕಾರದ ಹಪಹಪಿತನ ಹೆಚ್ಚಾಗಿದೆ. ಹಿಂದೆ ಸಿಎಂಗಳಾಗಿದ್ದ ಎಸ್.ಎಂ.ಕೃಷ್ಣ, ಜೆ.ಹೆಚ್.ಪಟೇಲರು, ವಿರೇಂದ್ರ ಪಾಟೀಲರು, ರಾಮಕೃಷ್ಣ ಹೆಗ್ಡೆ ಹೀಗೆ ಅನೇಕ ಸಜ್ಜನ ರಾಜಕಾರಣಿಗಳು ಮಾತನಾಡುತ್ತಿದ್ದರೆ ಮುತ್ತು ರತ್ನಗಳು ಉದುರಿದಂತೆ ಮಾತುಗಳು ಹೊರಬರುತ್ತಿದ್ದವು. ಆದರೆ ಈಗಿನ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ ಅವರ ಅಹಂಕಾರ, ದುರಾಹಂಕಾರದ ಮಾತುಗಳು ಕೇಳಿದರೆ ತೀವ್ರ ಬೇಸರವಾಗುತ್ತದೆ. ದಿನಬೆಳಗಾದರೆ ಕಾಂಗ್ರೆಸ್ ನವರು ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರು ಹೇಳುತ್ತಾರೆ. ಆದರೆ ಅವರನ್ನು ಚುನಾವಣೆಯಲ್ಲಿ ಸೋಲಿಸಿದವರೇ ಕಾಂಗ್ರೆಸ್ ನವರು. ಅಂಬೇಡ್ಕರ್ ಅವರು ಮೃತಪಟ್ಟಾಗ ಅವರ ಶವಸಂಸ್ಕಾರಕ್ಕೂ ಬರದೇ, ಅಂತ್ಯಕ್ರಿಯೆಗೆ ಜಾಗ ನೀಡಲಿಲ್ಲ, ಭಾರತದ ಸಂವಿಧಾನ ಶಿಲ್ಪಿಯಾಗಿರುವ ಅಂಬೇಡ್ಕರ್ ಅವರಿಗೆ ಭಾರತರತ್ನ ಸಹ ನೀಡಿಲ್ಲ. ದೇಶದ ಸರ್ವಾಂಗಿಣ ಪ್ರಗತಿಗೆ, ಭವಿಷ್ಯಕ್ಕೆ ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬರಬೇಕಿದೆ ಎಂದರು.

ಮುಖಂಡ ಹನುಮಂತ ಬಿರಾದಾರ ಮಾತನಾಡಿ, ಜಿಲ್ಲೆಯ ಅಜಾತಶತ್ರು, ಜಾತ್ಯಾತೀತ ರಾಜಕಾರಣಿ ರಮೇಶ ಜಿಗಜಿಣಗಿ ಅವರು ಇಷ್ಟು ವರ್ಷ ರಾಜಕಾರಣ ಮಾಡಿದರೂ ಯಾರಿಗೂ ತೊಂದರೆ ಕೊಟ್ಟವರಲ್ಲ, ಎಂದೂ ಜಾತಿ ರಾಜಕಾರಣ ಮಾಡಿದವರಲ್ಲ. ಜಿಲ್ಲೆಯ ಅಭಿವೃದ್ಧಿಗೆ ಒಂದು ಲಕ್ಷ ಕೋಟಿಯಷ್ಟು ಅನುದಾನ ತಂದು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರೂ ಎಂದು ಪ್ರಚಾರ ಪಡೆದವರಲ್ಲ. ಹಾಗಾಗಿ ಅಂತಹ ರಾಜಕಾರಣಿ ಮತ್ತೊಮ್ಮೆ ಆರಿಸಿ ಬಂದು ನರೇಂದ್ರ ಮೋದಿಯವರ ಕೈ ಬಲಪಡಿಸಬೇಕಿದೆ. ನಾವೆಲ್ಲಾ ಅವರ ಗೆಲುವಿಗೆ ಟೊಂಕಕಟ್ಟಿ ಕಂಕಣಬದ್ಧರಾಗಿದ್ದೇವೆ ಎಂದರು.

ಈ ವೇಳೆ ಮುಖಂಡ ಶರಣು ಬ್ಯಾಳಿ ವಿಜಯ ಜೋಶಿ ಉಪಸ್ಥಿತರಿದ್ದರು.

# ಹನುಮ ಜಯಂತಿ; ರಾಮನಗೌಡ ಪಾಟೀಲ ಭಾಗಿ

ಉದಯರಶ್ಮಿ ನ್ಯೂಸ್



ವಿಜಯಪುರ: ನಗರದಲ್ಲಿ ಹನುಮ ಜಯಂತಿ ಅಂಗವಾಗಿ ಮಂಗಳವಾರ ನಡೆದ ಉತ್ಸವ, ಪೂಜೆಯಲ್ಲಿ ನಗರ ಶಾಸಕರ ಪುತ್ರರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಘದ ನಿರ್ದೇಶಕರಾದ ರಾಮನಗೌಡ ಪಾಟೀಲ ಯತ್ನಾಳ ಭಾಗವಹಿಸಿ, ಶ್ರೀ ಆಂಜನೇಯನ ದರ್ಶನಾರ್ಶಿವಾದ ಪಡೆದುಕೊಂಡು, ನಾಡಿಗೆ ಒಳಿತಾಗಲೆಂದು ಪ್ರಾರ್ಥಿಸಿದರು.

ವಾರ್ಡ ನಂ.4ರ ವ್ಯಾಪ್ತಿಯ ಭೂತನಾಳ ಕೆರೆಯ ಹತ್ತಿರ ಇರುವ ಘಂಟೆ ಆಂಜನೇಯ ದೇವಸ್ಥಾನ ನಡೆದ ವಿಶೇಷ ಪೂಜೆಯಲ್ಲಿ ಭಾಗವಹಿಸಿ, ವಾರ್ಡ ನಂ.8ರ ಚಾಲುಕ್ಯ ನಗರದ ಹನುಮಾನ ದೇವಸ್ಥಾನಕ್ಕೆ ಭೇಟಿ ನೀಡಿ ಜಯಂತಿ ಆಚರಣೆಯಲ್ಲಿ ಭಾಗವಹಿಸಿದರು. ನಂತರ ಗುಜ್ಜರ ಗಲ್ಲಿಯ ಹನುಮಾನ ದೇವಸ್ಥಾನ ಹಾಗೂ ವಜ್ರ ಹನುಮಾನ ದೇವಸ್ಥಾನಕ್ಕೆ ತೆರಳಿ ಪೂಜೆಯಲ್ಲಿ ಭಾಗವಹಿಸಿದರು.

ಎಲ್ಲಾ ದೇವಸ್ಥಾನಗಳಲ್ಲಿಯೂ ಕಮಿಟಿ ಪದಾಧಿಕಾರಿಗಳು, ಅಲ್ಲಿನ ನಿವಾಸಿಗಳು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು.

# ಇಂಡಿ: ನೇಹಾ ಹತ್ಯೆ ಖಂಡಿಸಿ ಮಹಿಳೆಯರ ಪ್ರತಿಭಟನೆ

ಉದಯರಶ್ಮಿ ನ್ಯೂಸ್



ಇಂಡಿ: ಹುಬ್ಬಳ್ಳಿಯಲ್ಲಿ ನಡೆದ ವಿದ್ಯಾರ್ಥಿನಿ ನೇಹಾ ಹಿರೇಮಠ ಅವಳನ್ನು ಕೊಲೆ ಮಾಡಿದ ಕೊಲೆಗಡುಕನಿಗೆ ಸಾರ್ವಜನಿಕವಾಗಿ ಗಲ್ಲು ಶಿಕ್ಷೆ ವಿಧಿಸಬೇಕು. ಸರಕಾರ ಕೀಳು ಹೇಳಿಕೆ ನೀಡುವುದನ್ನು ಬಿಟ್ಟು ಮಹಿಳೆಯರ ರಕ್ಷಣೆಗೆ ಮುಂದಾಗಬೇಕು ಎಂದು ವಿಜಯಪೂರ ವಿಭಿನ್ನ ಅಭಿವೃದ್ಧಿ ಸಂಸ್ಥೆ ಅಧ್ಯಕ್ಷೆ ಶಾಮಲಾ ಬಗಲಿ, ಅನಸೂಯಾ ಮದರಿ ಆಗ್ರಹಿಸಿದರು.

ಅವರು ಮಂಗಳವಾರ ಪಟ್ಟಣದ ಅಂಬೇಡ್ಕರ್ ವೃತ್ತದಿಂದ ಮಿನಿವಿಧಾನಸೌಧವರೆಗೆ ಪ್ರತಿಭಟನಾ ರ್‍ಯಾಲಿ ನಡೆಸಿ ಆಡಳಿತ ಸೌಧ ಮುಂಭಾಗದಲ್ಲಿ ಶಿರಸ್ಥೇದಾರ ಆರ್.ಎಸ್ ಮುಜಗೊಂಡ ಅವರ ಮುಖಾಂತರ ಸರಕಾರಕ್ಕೆ ಮನವಿ ಮಾಡಿದರು.

ಇಂತಹ ಕೊಲೆಗಳಾಗುತ್ತಿರುವುದರಿಂದ ಶಾಲಾ ಕಾಲೇಜಿಗೆ ಮಕ್ಕಳನ್ನು ಕಳುಹಿಸಿಕೊಡಲು ಭಯದ ವಾತಾವರಣ ನಿರ್ಮಾಣವಾಗಿದೆ. ನೇಹಾ ಹಿರೇಮಠ ವಿದ್ಯಾರ್ಥಿನಿಯನ್ನು ಹತ್ಯೆ ಮಾಡಿದ ಆರೋಪಿಗೆ ಸರಕಾರ ಅಕ್ಕ ಶಿಕ್ಷೆ ವಿಧಿಸಬೇಕು. ತಪ್ಪಿತಸದ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು.

ನಿತಿನ್‌ಕುಮಾರ್ ಆರಿ, ಎಸ್.ಜೆ. ವಾಲೀಕಾರ, ಶಶಿಕಲಾ ಬೆಟಗೇರಿ, ರಾಜೇಶ್ವರಿ ಕ್ಷತ್ರಿ, ಐಶ್ವರ್ಯಾ ಮಾದರ್, ನಿಖಿತಾ ರಾಠೋಡ, ದೀಪಾ ಆಲಮೇಲ, ಸ್ನೇಹಾ ನಾಟೀಕಾರ್, ಅನಸೂಯಾ ಮದರಿ, ಬೀನಾ ಕೂಡಗಿ, ಅನಸೂಯಾ ಮದರಿ, ಭೌರಮ್ಮ ನಾವಿ, ಸ್ನೇಹಾ ನಾಟೀಕಾರ, ಕೀರ್ತಿ ಬನಸೋಡೆ, ವೈಶಾಲಿ ಬಣಿಗೇರ ಸೇರಿದಂತೆ ಇನ್ನಿತರರು ಇದ್ದರು.

# ಸಂಸ್ಕಾರವಿಲ್ಲದ ಮನೆ ಸ್ಮಶಾನಕ್ಕೆ ಸಮ :ಗುರುಪಾದ ಶ್ರೀ

ಉದಯರಶ್ಮಿ ನ್ಯೂಸ್




ಚಿಮ್ಮಡ: ಇಂದಿನ ಆಧುನಿಕ ಯುಗದಲ್ಲಿ ಸಂಸ್ಕೃತಿ, ಸಂಸ್ಕಾರ ಕಲಿಯಬೇಕಾದ ಅವಶ್ಯಕತೆ ಪ್ರತಿಯೊಬ್ಬರಿಗೂ ಇದೆ. ಸಂಸ್ಕಾರ ಇಲ್ಲದ ಮನೆ ಸ್ಮಶಾನಕ್ಕೆ ಸಮ ಎಂದು ಬೀಳಗಿ ಕಲ್ಮಠದ ಶ್ರೀ ಗುರುಪಾದ ಶಿವಾಚಾರ್ಯರು ಹೇಳಿದರು.

ಸ್ಥಳೀಯ ಪ್ರಭುಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳದಾಗಿದ್ದ ಲಿಂಗೈಕ್ಯ ಶ್ರೀ ವಿರಕ್ತಮಹಾಸ್ವಾಮಿಗಳ 31ನೇ ಪುಣ್ಯಸ್ಮರನೋತ್ಸವ, ಹಾಗೂ ಸಾಧಕರ ಸನ್ಮಾನ ಕಾರ್ಯಕ್ರಮದ ಚಿಂತನ ಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಮಠಗಳಲ್ಲಿ ಸಂಸ್ಕಾರ, ಸಂಸ್ಕೃತಿ, ಆದರ್ಶಗಳು ಹಾಸುಹೊಕ್ಕಾಗಿರುತ್ತದೆ ಅದನ್ನ ಸಾರ್ವಜನಿಕರ ಜೀವನದಲ್ಲಿ ತುಂಬುವುದು ಮಠಾಧೀಶರ ಕರ್ತವ್ಯ, ಮನುಷ್ಯ ಸುಖ ಶಾಂತಿ ನೆಮ್ಮದಿ ಪಡೆಯಬೇಕಾದರೆ ಶರಣ ಮಹಾತ್ಮರ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಶರಣರ ನೆನೆಯುವುದೇ ಪುಣ್ಯಸ್ಮರಣೋತ್ಸವವೆಂದರು,

ಸಾನಿಧ್ಯ ವಹಿಸಿದ ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಮಾತನಾಡಿ, ಯಾವುದೇ ಧರ್ಮಬೇಧವಿಲ್ಲದೆ ಬಸವಾದಿ ಶರಣರ ಮಾರ್ಗದಲ್ಲಿ ನಡೆಯುತ್ತಿರುವ ಐತಿಹಾಸಿಕ ಮಠಗಳೆಂದರೆ ವಿರಕ್ತಮಠಗಳು ಮಾತ್ರ ಅವು ತಮ್ಮ ಸಾಮಾಜಿಕ ಜವಾಬ್ದಾರಿ ನಿಭಾಯಿಸುತ್ತಿವೆ ಎಂದರು.

ಸನ್ಮಾನ ಸ್ವೀಕರಿಸಿದ ವಾಸುದೇವ ಇಗವೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕಳೆದ ಹದಿನೈದು ದಿನಗಳಿಂದ ಕಿತ್ತೂರು-ಕುಲವಳ್ಳಿಯ ಸುಕುಮಾರ ಯೋಗಾಶ್ರಮದ ಶ್ರೀ ಓಂ ಗುರೂಜಿಯವರಿಂದ ಪ್ರಸ್ತುತಪಡಿಸಿದ ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳ ಜೀವನ ದರ್ಶನ ಪ್ರವಚನ ಕಾರ್ಯಕ್ರಮವನ್ನು ಮಂಗಲಗೊಳಿಸಲಾಯಿತು.

ಮುಖ್ಯ ಅಥಿತಿಗಳಾಗಿ ರಾಮಣ್ಣ ಮುಗಳಖೋಡ, ಪುಂಡಲಿಕಪ್ಪಾ ಪೂಜಾರಿ, ಬಾಳಪ್ಪಾ ಹಳಿಂಗಳಿ, ಅಣ್ಣಪ್ಪ ಪಾಟೀಲ, ರಾಮಣ್ಣ ಬಗನಾಳ,ಬಿ.ಎಸ್. ಪಾಟೀಲ ಗ್ರಾ.ಪಂ. ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ, ಪರಪ್ಪಾ ಪಾಲಭಾವಿ ಸೇರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತರಿದ್ದರು.

ಇದೇ ವೇಳೆ ಕಾನಿಪ ಮಹಾಲಿಂಗಪುರ ಘಟಕದ ಅಧ್ಯಕ್ಷ ಮಹೇಶ ಮನ್ನಯನವರಮಠ, ರಬಕವಿ-ಬನಹಟ್ಟಿ ಘಟಕದ ಅಧ್ಯಕ್ಷ ವಿಶ್ವಜ ಕಾಡದೇವರ, ಭೂಮಿಕಾ ಪಬ್ಲಿಕ್ ಪತ್ರಿಕೆ ಸಂಪಾದಕ ಮಾನಿಂಗಯ್ಯ ಜೇ. ಮಠದ, ವಾಸುದೇವ ಇಗವೇ ಸೇರಿದಂತೆ ಹಲವಾರು ಜನ ಸಾಧಕರನ್ನು ಸನ್ಮಾನಿಸಲಾಯಿತು.

ಶಿಕ್ಷಕ ಪ್ರಕಾಶ್ ಬಡಿಗೇರ ಸ್ವಾಗತಿಸಿದರು, ಪ್ರಕಾಶ್ ಪೂಜೇರಿ ನಿರೂಪಿಸಿದರು, ಕಾಳು ಬಡಿಗೇರ ವಂದಿಸಿದರು.

# ಚುನಾವಣಾ ಆಯೋಗದ ನಿರ್ದೇಶನಗಳ ಪಾಲನೆ ಕಡ್ಡಾಯ

ಉದಯರಶ್ಮಿ ನ್ಯೂಸ್

ವಿಜಯಪುರ: ಭಾರತ ಚುನಾವಣಾ ಆಯೋಗದ ನಿರ್ದೇಶನಗಳನ್ನು ಪಾಲಿಸುವುದು ಕಡ್ಡಾಯವಾಗಿದ್ದು, ಈ ಕುರಿತು ವಿವಿಧ ರಾಜಕೀಯ ಪಕ್ಷಗಳ ಕಾರ್ಯಕರ್ತರಿಗೆ ಮತ್ತು ಪೋಲಿಂಗ್ ಏಜೆಂಟರಿಗೆ ಗಂಬೀರವಾಗಿ ತಿಳುವಳಿಕೆ ನೀಡುವ ಕಾರ್ಯವಾಗಬೇಕು ಎಂದು ವಿಜಯಪುರ ಮೀಸಲು ಲೋಕಸಭಾ ಚುನಾವಣೆಯ ಸಾಮಾನ್ಯ ವೀಕ್ಷಕರಾದ ಡಾ. ರತನಕನ್ವರ ಹೆಚ್. ಗಡವಿಚರಣ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ರಾಜಕೀಯ ಪಕ್ಷಗಳ ಪದಾಧಿಕಾರಿಗಳು ಮತ್ತು ಅಭ್ಯರ್ಥಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು ಚುನಾವಣೆಗೆ ದಿನಾಂಕ ಘೋಷಣೆಯಾದ ದಿನದಿಂದ ಫಲಿತಾಂಶ ಪ್ರಕಟವಾಗುವರೆಗೂ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಪಾರದರ್ಶಕವಾಗಿರಬೇಕಾಗಿದ್ದು, ನೀವು ನೇಮಕ ಮಾಡಿಕೊಳ್ಳುವ ಏಜೇಂಟರು ಚುನಾವಣಾ ಆಯೋಗದ ಮಾರ್ಗಸೂಚಿಗಳ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿರಬೇಕು. ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ರೂಪದ ನಿರ್ದಿಷ್ಟವಾದ ದೂರು ಅಥವಾ ಸಮಸ್ಯೆ ಇದ್ದಲ್ಲಿ ಅದನ್ನು ಚುನಾವಣಾ ವೀಕ್ಷಕರ ಗಮನಕ್ಕೆ ತರಬೇಕು ಎಂದರು.

ವೆಚ್ಚ ವೀಕ್ಷಕ ಅನುಪ್ ಕುಮಾರ್ ಮಾತನಾಡಿ ಚುನಾವಣಾ ಆಯೋಗದ ನಿರ್ದೇಶನದಂತೆ ಪ್ರತಿಯೊಬ್ಬ ಅಭ್ಯರ್ಥಿಯು ಈ ಚುನಾವಣೆಗಾಗಿಯೇ ಅಭ್ಯರ್ಥಿ ಹೆಸರಿನಲ್ಲಿ ಪ್ರತ್ಯೇಕವಾದ ಬ್ಯಾಂಕ್ ಖಾತೆಯನ್ನು ತೆರೆಯಬೇಕಾಗುತ್ತದೆ. ಚುನಾವಣಾ ಆಯೋಗವು ಅಭ್ಯರ್ಥಿಗಳು ನಡೆಸುವ ಸಾರ್ವಜನಿಕಮ ಸಭೆಗಳು, ರ್‍ಯಾಲಿ, ಬ್ಯಾನರ್ ಸೇರಿದಂತೆ ಚುನಾವಣಾ ಪ್ರಚಾರಕ್ಕೆ ಕಾನೂನುಬದ್ದವಾಗಿ ಮಾತ್ರ ಖರ್ಚು ಮಾಡಲು ಈ ಬಾರಿ 95 ಲಕ್ಷದವರೆಗೂ ಅನುಮೋದಿಸುತ್ತಿರುತ್ತದೆ. ಇದನ್ನು ಹೊರತುಪಡಿಸಿದ ಸಂಶಯಾಸ್ಪದ ವಹಿವಾಟುಗಳು ಕಂಡು ಬಂದಲ್ಲಿ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. .

ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಯಾಗಿರುವ ಟಿ. ಭೂಬಾಲನ್ ಮಾತನಾಡಿ ಮತಯಾಚನೆಯ ಜಾಹಿರಾತುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಬೇಕಾದಲ್ಲಿ ಮತ್ತು ಕರಪತ್ರಗಳನ್ನು ಮುದ್ರಿಸಲು ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಪಕ್ಷದ ಬಾವುಟಗಳನ್ನು ರಾಜಕೀಯ ಪಕ್ಷಗಳ ಕಾರ್ಯಲಯದ ಕಚೇರಿ ಹೊರತುಪಡಿಸಿ ಯಾರ ಮನೆಯ ಮೇಲು ಪ್ರದರ್ಶಿಸಲು ಅವಕಾಶವಿರುವುದಿಲ್ಲಾ. ಈ ಎಲ್ಲಾ ಮಾರ್ಗಸುಚಿಗಳನ್ನು ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಅನುಸರಿಸಬೇಕಾಗಿರುತ್ತದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಾಣೆ ಮಾತನಾಡಿ ಮೆರವಣಿಗೆಯನ್ನು ಸಂಘಟಿಸುವ ಪಕ್ಷ ಅಥವಾ ಅಭ್ಯರ್ಥಿ ಮುಂಚಿತವಾಗಿಯೇ ಸ್ಥಳೀಯ ಪೊಲೀಸ್ ಅಧಿಕಾರಿಗೆ ಮೆರವಣಿಗೆಯ ದಿನಾಂಕ, ಸಮಯ, ಅದು ಸಾಗುವ ಮಾರ್ಗ, ಕೊನೆಗೊಳ್ಳುವ ಸಮಯ ಇತ್ಯಾದಿಯಾಗಿ ತಿಳಿಸತಕ್ಕದ್ದು. ಯಾವುದೆ ರಾಜಕೀಯ ಪಕ್ಷವಾಗಿರಲಿ, ಅಭ್ಯರ್ಥಿಯಾಗಿರಲಿ ಕಾನೂನನ್ನು ಉಲ್ಲಂಘನೆ ಮಾಡುವಂತಿಲ್ಲ, ಎಲ್ಲರೂ ನಿಯಮಗಳನ್ನು ಪಾಲಿಸಬೇಕು. ಮತದಾನ ಮತ್ತು ಮತ ಎಣಿಕೆ ದಿನದಂದು ವಾಹಾನಗಳ ಸಂಚಾರದ ಮೇಲೆ ವಿಧಿಸುವ ನಿರ್ಬಂದಗಳನ್ನು ಪಾಲಿಸುವಲ್ಲಿ ಅಧಿಕಾರಿಗಳೊಂದಿಗೆ ಸಹಕರಿಸಬೇಕು ಎಂದು ತಿಳಿಸಿದರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಸಚಿವ ಶಂಕರಗೌದ ಸೋಮನಾಳ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ರಾಜಕೀಯ ಪಕ್ಷಗಳ ಮತ್ತು ಅಭ್ಯರ್ಥಿಗಳಿಗೆ ಮಾದರಿ ನಡತೆ ಸಂಹಿತೆ ಕುರಿತು ತಿಳುವಳಿಕೆ ನೀಡಿದರು.

ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ಜಿಲ್ಲಾ ಪಂಚಾಯತಿ ಮುಖ್ಯ ಲೆಕ್ಕಾಧಿಕಾರಿ ರಾಮಣ್ಣ ಅಥಣಿ ಸೇರಿದಂತೆ ಇತರರು ಇದ್ದರು.

## ರ್‍ಯಾಲಿಗೆ ಹಸಿರು ನಿಶಾನೆ ತೋರಿ ಚಾಲನೆ ನೀಡಿದ ಜಿಪಂ ಸಿಇಓ ಋಷಿ ಆನಂದ

# ವಿಶೇಷ ಚೇತನರ ಚುನಾವಣಾ ಜಾಗೃತಿ ಬೈಕ್ ರ್‍ಯಾಲಿಗೆ ಚಾಲನೆ

ಉದಯರಶ್ಮಿ ನ್ಯೂಸ್

ವಿಜಯಪುರ: ದೇಶದಲ್ಲಿ ನಡೆಯುವ ಚುನಾವಣೆಗಳು ಪ್ರಜಾಪ್ರಭುತ್ವದ ಗೌರವವನ್ನು ಎತ್ತಿ ಹಿಡಿಯುವ ಕೆಲಸ ಮಾಡುತ್ತವೆ. ಸಂವಿಧಾನ ನೀಡಿರುವ ಮತದಾನದ ಹಕ್ಕು ದೇಶದ ಸಂಸತ್ತನ್ನು ನಿರ್ಮಿಸುವ ಹಕ್ಕಾಗಿದೆ. ನಾವೆಲ್ಲ ಚುನಾವಣೆ ದಿನ ಯಾರು ಕೂಡ ಮತದಾನದಿಂದ ಹಿಂದೆ ಉಳಿಯದೆ ನಿಮ್ಮ ಮತ ನಿಮ್ಮ ಹಕ್ಕು ತಪ್ಪದೇ ಮತ ಚಲಾಯಿಸುವ ಮೂಲಕ ಜಿಲ್ಲೆಯಲ್ಲಿ ನೂರರಷ್ಟು ಮತದಾನ ಮಾಡುವಂತೆ ಸಿಇಓ ಋಷಿ ಆನಂದ ಕರೆ ನೀಡಿದರು.

ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಪಂಚಾಯತ, ಜಿಲ್ಲಾ ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಸೋಮವಾರದಂದು ಹಮ್ಮಿಕೊಂಡಿದ್ದ 'ವಿಶೇಷ ಚೇತನರ ಚುನಾವಣಾ ಜಾಗೃತಿ ಜಾಥಾ ಬೈಕ್ ರ್‍ಯಾಲಿಗೆ' ಹಸಿರು ನಿಶಾನೆ ತೊರುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು. ಸುಭದ್ರ ಸರ್ಕಾರ ರಚನೆಗೆ ಪ್ರತಿಯೊಬ್ಬರ ಮತದಾನವು ಪ್ರಮುಖವಾಗಿದೆ. ಕಡ್ಡಾಯ ಮತದಾನ ರಕ್ತದಾನ, ಅನ್ನದಾನ ಸೇರಿದಂತೆ ಇನ್ನಿತರೆ ಯಾವುದೇ ದಾನಕ್ಕಿಂತಲೂ ಹೆಚ್ಚಿನ ದಾನವಾಗಿದೆ. ಕೂಲಿಕಾರರು ಎಲ್ಲರೂ ಮತಚಲಾಯಿಸಬೇಕು. ರ ಸ್ವಂತ ಊರಿನಿಂದ ಬೇರೆ ಊರಿಗೆ ತೆರಳಿರುವ ತಮ್ಮ ಕುಟುಂಬ ಸದಸ್ಯರನ್ನು ಮತದಾನದ ದಿನ ಕರೆಸಿಕೊಂಡು ಮತದಾನ ಮಾಡಿಸಿ ಎಂದರು.




ಈ ವೇಳೆಯಲ್ಲಿ ಜಿಲ್ಲಾ ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳಾದ ರಾಜಶೇಖರ ದೈವಾಡಿಯವರು ಮಾತನಾಡುತ್ತ. ಲೋಕಸಭಾ ಚುನಾವಣೆಯಲ್ಲಿ ಎಲ್ಲರೂ ತಪ್ಪದೇ ತಮ್ಮ ಮತಗಟ್ಟೆಗೆ ಭೇಟಿ ನೀಡಿ ಮತದಾನ ಮಾಡಬೇಕು. ದೇಶದ ಉನ್ನತಿ ಹಾಗೂ ಏಳಿಗೆ ಎಂಬುದು ದೇಶದ ಪ್ರಜೆಗಳ ಅಬಿಪ್ರಾಯದ ಮೇಲೆ ನಿಂತಿರುತ್ತದೆ. ಅಂತಹ ಆಯ್ಕೆಯ ಹಕ್ಕು ಚುನಾವಣೆ ನೀಡುತ್ತದೆ. ಸಮಯೋಚಿತವಾಗಿ ಸೂಕ್ತ ಅಭ್ಯರ್ಥಿಗೆ ಮತ ನೀಡುವುದರಿಂದ ರಾಷ್ಟ್ರದ ಅಬಿವೃದ್ಧಿಗೆ ಪೂರಕವಾಗುತ್ತದೆ. ಈ ಕಾರಣಕ್ಕಾಗಿ ಸಂವಿಧಾನ ಪ್ರತಿಯೊಬ್ಬ ವ್ಯಕ್ತಿಗೂ ಕೂಡ ಮತದಾನದ ಹಕ್ಕು ನೀಡಿದೆ. ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಈ ವಿಶೇಷ ಚೇತನರ ಚುನಾವಣಾ ಜಾಗೃತಿ ಜಾಥಾ ಬೈಕ್ ರ್‍ಯಾಲಿಯು ಜಿಲ್ಲಾ ಆಸ್ಪತ್ರೆಯಿಂದ ಹೊರಟು ಶಿವಾಜಿ ಚೌಕ್, ಗಾಂಧಿ ಚೌಕ್, ಬಸವೇಶ್ವರ ಹಾಗೂ ಅಂಬೇಡ್ಕರ್ ಸರ್ಕಲ್‌ದ ಮೂಲಕ ಕಂದಗಲ ಹಣಮಂತರಾಯ ರಂಗಮಂದಿರದವರೆಗೆ ಸಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸುವ ಮೂಲಕ ಅಂತ್ಯಗೊಂಡಿತು.

ಈ ಸಂದರ್ಭದಲ್ಲಿ ಡಿಎಚ್‌ಇಓ, ಜಿಲ್ಲಾ ಮತ್ತು ತಾಲೂಕಾ ಮಟ್ಟದ ಆರೋಗ್ಯ ಇಲಾಖೆಯ ಸಿಬ್ಬಂದಿ, ಸ್ವೀಪ್ ಸಮಿತಿಯ ನೋಡಲ್ ಅಧಿಕಾರಿಗಳು, ನಗರಪಾಲಿಕೆಯ ಆಯುಕ್ತರು, ತಾಲೂಕಾ ಪಂಚಾಯತ ಕಾರ್ಯನಿರ್ವಾಕ ಅಧಿಕಾರಿಗಳು, ನಗರ, ತಾಲೂಕು ಹಾಗೂ ಗ್ರಾಮ ಪಂಚಾಯತ ಮಟ್ಟದ ವಿಆರ್‌ಡಬ್ಲ್ಯೂ, ಎಂಆರ್‌ಡಬ್ಲ್ಯೂ ಮತ್ತು ವಿಶೇಷಚೇತನರು ಉಪಸ್ಥಿತರಿದ್ದರು.

# ವಿಶ್ವ ಪುಸ್ತಕ ಹಾಗೂ ಕೃತಿ ಸ್ವಾಮ್ಯ ದಿನಾಚರಣೆ

ಉದಯರಶ್ಮಿ ನ್ಯೂಸ್




ಇಂಡಿ: ವಿಶ್ವ ಪುಸ್ತಕ ಮತ್ತು ಹಕ್ಕುಸ್ವಾಮ್ಯ ದಿನವು ವಿವಿಧ ದೇಶಗಳು ಮತ್ತು ಪ್ರದೇಶಗಳ ಪುಸ್ತಕಗಳನ್ನು ಪ್ರಚಾರ ಮಾಡುವ ಮೂಲಕ, ಕೃತಿಗಳ ಅನುವಾದಗಳನ್ನು ಪ್ರೋತ್ಸಾಹಿಸುವ ಮೂಲಕ ಮತ್ತು ವೈವಿಧ್ಯಮಯ ಸಾಹಿತ್ಯ ಸಂಪ್ರದಾಯಗಳನ್ನು ಉತ್ತೇಜಿಸುವ ಮೂಲಕ ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸುತ್ತದೆ. ಇದು ವಿಶ್ವ ಸಾಹಿತ್ಯದ ಶ್ರೀಮಂತಿಕೆ ಮತ್ತು ವೈವಿಧ್ಯತೆಯನ್ನು ಆಚರಿಸುತ್ತದೆ ಎಂದು ಗ್ರಂಥಪಾಲಕ ರಾಘವೇಂದ್ರ ಇಂಗನಾಳ ಹೇಳಿದರು.

ಪಟ್ಟಣದ ಜಿ.ಆರ್.ಗಾಂಧಿ ಕಲಾ, ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಎಮ್.ಪಿ.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದ ಅಡಿಯಲ್ಲಿ "ವಿಶ್ವ ಪುಸ್ತಕ ಹಾಗೂ ಕೃತಿ ಸ್ವಾಮ್ಯ" ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಾಂಶುಪಾಲ ಡಾ. ಎಸ್.ಬಿ.ಜಾಧವ ಮಾತನಾಡಿ ಓದುವದು ಜೊತೆಗೆ ಬರೆಯುವುದು ಪ್ರತಿಯೊಬ್ಬ ಕಲಿಕಾರ್ಥಿಯ ಆದ್ಯ ಕರ್ತವ್ಯವಾಗಿದೆ ನಾವೆಲ್ಲ ಓದುಗ ಉಪನ್ಯಾಸಕರು ಮಹತ್ವದ ಪುಸ್ತಕಗಳ ಓದಿನಿಂದ ವಿದ್ಯಾರ್ಥಿಗಳ ಆಳಕ್ಕೀಳಿದು ಪಾಠಮಾಡಬಹುದು. ಎಂದು ಹೇಳಿದರು.

ಪ್ರಾಧ್ಯಾಪಕರಾದ ಡಾ.ಶ್ರೀಕಾಂತ ರಾಠೋಡ, ಡಾ.ಜಯಪ್ರಸಾದ ಡಿ, ಮಲ್ಲಿಕಾರ್ಜುನ ಕೋಣದೆ ಮಾತನಾಡಿದರು.

ಡಾ.ಪಿ.ಕೆ.ರಾಠೋಡ, ಡಾ.ಸುರೇಂದ್ರ ಕೆ, ಶೃತಿ ಪಾಟೀಲ, ಬಲರಾಮ ವಡ್ಡರ, ಶ್ವೇತಾ ಕಾಂತ, ಪಂಕಜ ಕುಲಕರ್ಣಿ, ಶೃತಿ ಬಿರಾದಾರ, ಪರಶುರಾಮ ಅಜಮನಿ ಮತ್ತಿತರಿದ್ದರು.

# ಬಿರುಗಾಳಿಗೆ ನೆಲಕ್ಕುರುಳಿದ ಬಿಎಸ್ಸೆನ್ನೆಲ್ ಟವರ್

ಉದಯರಶ್ಮಿ ನ್ಯೂಸ್



ಚಡಚಣ: ತಾಲೂಕಿನ ರೇವತಗಾಂವ ಗ್ರಾಮದಲ್ಲಿ ಸೋಮವಾರ ಬೀಸಿದ ಬಿರುಗಾಳಿಗೆ ಗ್ರಾಮದ ಪಿಕೆಪಿಎಸ್ ಆವರಣದಲ್ಲಿದ್ದ ಬಿಎಸ್‌ಎನ್‌ಎಲ್ ಟವರ್ ಉರುಳಿ ಬಿದ್ದಿದೆ.

ಇದರಿಂದ ಅಕ್ಕಪಕ್ಕದ ಮನೆಗಳ ಮೇಲೆ ಉರುಳಿರುವುದರಿಂದ ಕೆಲವು ಮನೆಗಳು ಜಖಮಗೊಂಡಿವೆ. ಇದರಿಂದ ಯಾವುದೇ ಜೀವ ಹಾನಿಯಾಗಿಲ್ಲ ಎಂದು ತಿಳಿದುಬಂದಿದೆ.

### ಕಾಂಗ್ರೆಸ್ ಅಭ್ಯರ್ಥಿ ಆಲಗೂರ ಪರ ಸಚಿವರು-ಶಾಸಕರಿಂದ ಸಾಮೂಹಿಕ ಪ್ರಚಾರ

# ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಆಲಗೂರ ಗೆಲ್ಲಿಸಿ :ಎಂ.ಬಿ.ಪಾಟೀಲ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕಾಂಗ್ರೆಸ್ ಅಭ್ಯರ್ಥಿ ಪ್ರೊ ರಾಜು ಆಲಗೂರ ಪರ ಸಾಮೂಹಿಕ ಪ್ರಚಾರ ಮಾಡುತ್ತಿರುವ ಜಿಲ್ಲೆಯ ಸಚಿವರು, ಶಾಸಕರು ಮತ್ತು ಮುಖಂಡರು ಇಂದು ಮಂಗಳವಾರ ದ್ರಾಕ್ಷಿನಾಡು ತಿಕೋಟಾದಲ್ಲಿ ಭರ್ಜರಿ ಪ್ರಚಾರ ನಡೆಸಿದರು.

ಜತ್ ರಸ್ತೆಯಲ್ಲಿ ಆಯೋಜಿಸಲಾಗಿದ್ದ ಬೃಹತ್ ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ. ಬಿ. ಪಾಟೀಲ, ಜವಳಿ, ಸಕ್ಕರೆ ಮತ್ತು ಎಪಿಎಂಸಿ ಸಚಿವ ಶಿವಾನಂದ ಪಾಟೀಲ, ಮತ್ತು ಶಾಸಕರು ಸಾಮೂಹಿಕವಾಗಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಎಸ್. ಲೋಣಿ, ಜಿಲ್ಲೆಯಲ್ಲಿ ಸಚಿವರು, ಶಾಸಕರು ಮತ್ತು ಮುಖಂಡರು ಒಗ್ಗಟ್ಟಾಗಿ ಸಾಮೂಹಿಕವಾಗಿ ಪ್ರಚಾರ ಕೈಗೊಂಡಿದ್ದೇವೆ. ದಿನೇ ದಿನೇ ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಅವರ ಪರ ಅಲೆ ಹೆಚ್ಚುತ್ತಿದ್ದು, ಮತದಾರರು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವ ಮೂಲಕ ಕಾಂಗ್ರೆಸ್ಸಿಗೆ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ. ಮತದಾರರಿಗೆ ಈಗ ಕೇಂದ್ರ ಸರಕಾರದ ಸುಳ್ಳು ಭರವಸೆಗಳ ಅರಿವಾಗಿದ್ದು, ಅವರೆಲ್ಲರೂ ಈಗ ಜಾಗೃತರಾಗಿದ್ದಾರೆ. ಅಷ್ಟೇ ಅಲ್ಲ, ಪ್ರೊ. ರಾಜು ಆಲಗೂರ ಅವರಿಗೆ ಮತ ಹಾಕುವ ಮೂಲಕ ಭರ್ಜರಿ ಗೆಲುವಿಗೆ ಕೈಜೋಡಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜವಳಿ, ಸಕ್ಕರೆ ಮತ್ತು ಕಬ್ಬು ಅಭಿವೃದ್ಧಿ ಹಾಗೂ ಎಪಿಎಂಸಿ ಸಚಿವ ಶಿವಾನಂದ ಎಸ್. ಪಾಟೀಲ ಮಾತನಾಡಿ, ಪ್ರೊ. ರಾಜು ಆಲಗೂರ ತಿಕೋಟಾ ತಾಲೂಕಿನವರಾಗಿದ್ದು, ಅವರು ಸಂಸದರಾಗಿ ಆಯ್ಕೆಯಾಗುವ ಅವಕಾಶವನ್ನು ಎಲ್ಲರೂ ಸದುಪಯೋಗ ಪಡಿಸಿಕೊಳ್ಳಬೇಕು. ವಿಜಯಪುರ ಮತ್ತು ಬಾಗಲಕೋಟೆಯ ಹಾಲಿ ಸಂಸದರು ಏನೂ ಅಭಿವೃದ್ಧಿ ಮಾಡಿಲ್ಲ. ಇದನ್ನು ಪ್ರಶ್ನಿಸಲು ಸಂಬಂಧಿಸಿದ ಸಂಸದರೂ ಕೈಗೆ ಸಿಗುವುದಿಲ್ಲ. ರಾಜ್ಯ ಕೃಷಿ ಸಚಿವರು, ಸಿಎಂ ದೆಹಲಿಗೆ ಹೋಗಿ ಕೈಮುಗಿದು ಬರ ಪರಿಹಾರ ಕೇಳಿದರೂ ಪ್ರಧಾನಿ ಹಣ ಬಿಡುಗಡೆ ಮಾಡಿಲ್ಲ. ಅವರು ಎಲ್ಲವನ್ನೂ ಖಾಸಗೀಕರಣ ಮಾಡುತ್ತಿದ್ದು, ಮುಂದೆ ನಮ್ಮನ್ನು, ನಿಮ್ಮನ್ನು ಮಾರಾಟ ಮಾಡಬಹುದು. ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಸೂರ್ಯ ಹುಟ್ಟುವುದು ಎಷ್ಟು ಸತ್ಯವೋ ವಿಜಯಪುರ ಮತ್ತು ಬಾಗಲಕೋಟೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಖಚಿತವಾಗಿದೆ.



ರಾಜ್ಯದಲ್ಲಿ ಕಾಂಗ್ರೆಸ್ 18 ರಿಂದ 20 ಕ್ಷೇತ್ರಗಳಲ್ಲಿ ಗೆಲ್ಲಲಿದೆ. ತಾವೂ ಕೂಡ ಪ್ರೊ. ರಾಜು ಆಲಗೂರ ಅವರಿಗೆ ಹೆಚ್ಚಿನ ಮತ ಹಾಕಿ ಕ್ಷೇತ್ರದ ಮಗನನ್ನು ಗೆಲ್ಲಿಸಬೇಕು ಎಂದು ಹೇಳಿದರು.

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ. ಬಿ. ಪಾಟೀಲ ಮಾತನಾಡಿ, ನೀರಾವರಿಯಿಂದಾಗಿ ಬರದ ನಾಡಿನಲ್ಲಿ ಈಗ ದೊಡ್ಡ ಬದಲಾವಣೆಯಾಗಿದ್ದು, ಬರದ ಈ ಸಂದರ್ಭದಲ್ಲಿ ಮಹಿಳೆಯರು ಖಾಲಿ ಕೊಡಗಳೊಂದಿಗೆ ಟ್ಯಾಂಕರ್ ಮುಂದೆ ಹೋಗಿ ನಿಲ್ಲುವುದು ತಪ್ಪಿದೆ. ಮುಂಬರುವ ದಿನಗಳಲ್ಲಿ ತುಬಚಿ-ಬಬಲೇಶ್ವರ ಏತ ನೀರಾವರಿ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಹಳ್ಳಗಳಿಗೆ ನೀರು ಬಿಡುವ ಮೂಲಕ ಪ್ರತಿಯೊಬ್ಬ ಬಾಕಿ ಉಳಿದಿರುವ ರೈತರ ಜಮೀನಿಗೆ ನೀರು ಒದಗಿಸಲಾಗುವುದು. ಅಚ್ಛೆ ದಿನ್ ಎಂಬ ಮೋದಿ ಘೋಷಣೆ ವಿಫಲವಾಗಿದ್ದು, ರೂಪಾಯಿ ಮೌಲ್ಯ ಕುಸಿದಿದೆ. ತೈಲ ಬೆಲೆ, ಅಡುಗೆ ಅನಿಲ ದರ ಹೆಚ್ಚಾಗಿದೆ. ಉದ್ಯೋಗ ನಷ್ಟ, ನೋಟ್ ಬ್ಯಾನ್ ನಿಂದ ಜನಸಾಮಾನ್ಯರು ಸಂತ್ರಸ್ತರಾಗಿದ್ದಾರೆ. ಹೀಗಾಗಿ ಬಿಜೆಪಿ ಈಗ ಮತ್ತೆ ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ಪ್ರಚಾರ ಮಾಡುತ್ತಿದೆ. ಐಟಿ, ಇಡಿ, ಸಿಬಿಐ ದಾಳಿ ನಡೆಸಿ ದಾಳಿಗೆ ಒಳಗಾದವ-ರಿಂದ ಎಲೆಕ್ಟ್ರಾಲ್ ಬಾಂಡ್ ಹೆಸರಿನಲ್ಲಿ ಖರೀದಿಸಲು ಒತ್ತಡ ಹಾಕಿದ್ದಾರೆ. ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಬಹಿರಂಗವಾದರೆ ಸಂಬಂಧಿಸಿದ ಎಲ್ಲರೂ ಎಲ್ಲರೂ ಜೈಲಿನಲ್ಲಿರಬೇಕಾಗುತ್ತದೆ ಎಂದು ಹೇಳಿದರು.

ವಿಜಯಪುರ ಜಿಲ್ಲೆ ಮತ್ತು ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಸಂಸತ್ತಿನಲ್ಲಿ ಧ್ವನಿ ಎತ್ತಲು ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಅವರನ್ನು ಎಲ್ಲರೂ ಭಾರಿ ಮತಗಳ ಅಂತರದಿಂದ ಗೆಲ್ಲಿಸಬೇಕು. ನಮ್ಮ ಅಭ್ಯರ್ಥಿ ಜಿಲ್ಲೆಯ ಅಭಿವೃದ್ಧಿ ಕುರಿತು 10 ಅಂಶಗಳ ಪ್ರಣಾಳಿಕೆ ಈಡೇರಿಸುವ ಗುರಿ ಹೊಂದಿದ್ದು, ಇದರಿಂದ ಜಿಲ್ಲೆಯಲ್ಲಿ ಸರ್ವಾಂಗೀಣ ಅಭಿವೃದ್ಧಿಯಾಗಲಿದೆ ಎಂದರು.

ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ ಗಾಂಧಿ ಅವರು ಏ. 26ರಂದು ವಿಜಯಪುರ ನಗರಕ್ಕೆ ಆಗಮಿಸುತ್ತಿದ್ದು, ತಾವೆಲ್ಲರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರ ವಿಚಾರಗಳನ್ನು ತಿಳಿದುಕೊಳ್ಳಬೇಕು ಎಂದು ಸಚಿವ ಎಂ. ಬಿ. ಪಾಟೀಲ ಮನವಿ ಮಾಡಿದರು.

ಇಂಡಿ ಶಾಸಕ ಯಶವಂತರಾಯಗೌಡ ವಿ. ಪಾಟೀಲ ಮಾತನಾಡಿ, ಜಿಲ್ಲೆಯಲ್ಲಿ ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ದೇಶಾದ್ಯಂತ ಮೋದಿ ವಿರೋಧಿ ಅಲೆಯಿದೆ. ಸಚಿವ ಎಂ. ಬಿ. ಪಾಟೀಲರು ಈ ಭಾಗದಲ್ಲಿ ನೀರು ಬಾರದ ಭಾಗಕ್ಕೆ ನೀರಾವರಿ ಮಾಡುವ ಮೂಲಕ ಜನರಿಗೆ ಸಂತೃಪ್ತಿ ತಂದಿದ್ದಾರೆ. ಹೀಗಾಗಿ ದ್ರಾಕ್ಷಿ ನಾಡಿನ ಪ್ರಜ್ಞಾವಂತ ಮತದಾರರು ನಿಮ್ಮ ಸ್ವಾಭಿಮಾನದ ಪ್ರತೀಕವಾಗಿರುವ ಮತ್ತು ಪ್ರಬುದ್ಧ ಅಭ್ಯರ್ಥಿಯಾಗಿರುವ ಪ್ರೊ. ರಾಜು ಆಲಗೂರ ಅವರಿಗೆ ಮತ ಹಾಕಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಂಬನಿ ನಿಯಮಿತ ಅಧ್ಯಕ್ಷ ಹಾಗೂ ಮುದ್ದೇಬಿಹಾಳ ಶಾಸಕ ಸಿ. ಎಸ್. ನಾಡಗೌಡ ಮಾತನಾಡಿ, ರಾಜಕೀಯ ವ್ಯವಸ್ಥೆಯಲ್ಲಿ ನಿಮ್ಮ ಹಿತ ಬಯಸುವ ಸರಕಾರವನ್ನು ಆಯ್ಕೆ ಮಾಡಿದರೆ ನಿಮ್ಮ ಪರವಾಗಿ ಕೆಲಸ ಮಾಡುತ್ತಾರೆ. ಪ್ರೊ. ರಾಜು ಆಲಗೂರ ಪ್ರಾಧ್ಯಾಪಕರಾಗಿ, ಶಾಸಕರಾಗಿ ಸೇವೆ ಮಾಡಿದ್ದು, ನಿಮ್ಮ ಪರವಾಗಿ ದುಡಿಯಲು ಚುನಾವಣೆಯಲ್ಲಿ ಗೆದ್ದು ನಿಮ್ಮ ಪರವಾಗಿ ಕೆಲಸ ಮಾಡಲಿದ್ದಾರೆ. ಎಲ್ಲರೂ ಸರಕಾರದ ಯೋಜನೆಗಳ ಬಗ್ಗೆ ಜನಜಾಗೃತಿ ಮೂಡಿಸಿ ಶೇ. 80 ರಷ್ಟು ಮತದಾನ ದಾಖಲಾಗುವಂತೆ ಮಾಡಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದು ಹೇಳಿದರು.

ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಮಾತನಾಡಿ, ಕಳೆದ 10 ವರ್ಷಗಳಿಂದ ರಾಜ್ಯದ ಅಭಿವೃದ್ಧಿಗೆ ಕೇಂದ್ರ ಸಮರ್ಪಕವಾದ ಅನುದಾನ ನೀಡಿಲ್ಲ. ಕಾಂಗ್ರೆಸ್ ಸ್ವಾತಂತ್ರ್ಯಕ್ಕಾಗಿ ಹೋರಾಡಿ ನಂತರ ದೇಶದ ಅಮೂಲಾಗ್ರ ಬದಲಾವಣೆಗೆ ಶ್ರಮಿಸಿದೆ. ಸಂಸತ್ತಿನಲ್ಲಿ ನಿಮ್ಮೆಲ್ಲರ ಸಮಸ್ಯೆಗಳಿಗೆ ಧ್ವನಿಯಾಗಿ ಸ್ಪಂದಿಸಲು ಈ ಬಾರಿ ಅವಕಾಶ ನೀಡಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಎಐಸಿಸಿ ವೀಕ್ಷಕ ಸಯ್ಯದ ಬುರಾನ, ವಿಧಾನ ಪರಿಷತ ಶಾಸಕ ಪ್ರಕಾಶ ರಾಠೋಡ ಮಾತನಾಡಿದರು.

ಇದೇ ವೇಳೆ ಜಿಲ್ಲಾ ಪಂಚಾಯಿತಿ ಬಿಜೆಪಿ ಮಾಜಿ ಸದಸ್ಯೆ ಶೋಭಾ ಹಲ್ಯಾಳ ಮತ್ತ ತಿಕೋಟಾ ತಾಲೂಕು ಬಿಜೆಪಿ ಕಾರ್ಯದರ್ಶಿ ಹಮೀದ ಬಾಗವಾನ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ನಾಗಠಾಣ ಶಾಸಕ ವಿಠ್ಠಲ ಧೋ. ಕಟಕದೊಂಡ, ಸಿಂದಗಿ ಶಾಸಕ ಅಶೋಕ ಮನಗೂಳಿ, ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ, ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ, ಮಾಜಿ ಶಾಸಕ ಶರಣಪ್ಪ ಸುಣಗಾರ, ತಿಕೋಟಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದು ಗೌಡನವರ, ಬಬಲೇಶ್ವರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈರಗೊಂಡ ಬಿರಾದಾರ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ವಿದ್ಯಾರಾಣಿ ತುಂಗಳ, ಕಾಂಗ್ರೆಸ್ ಅಬ್ದುಲ ಹಮೀದ್ ಮುಶ್ರಿಫ್, ಮುಖಂಡರಾದ ಸಿದ್ದಣ್ಣ ಸಕ್ರಿ, ಅರ್ಜುನ ರಾಠೋಡ, ಜಕ್ಕಪ್ಪ ಯಡವೆ, ಮಧುಕರ ಜಾಧವ, ಭಾಗೀರಥಿ ತೇಲಿ, ಯಾಕೂಬ ಜತ್ತಿ, ಪ್ರಭಾವತಿ ನಾಟಿಕಾರ, ಆರ್. ಜಿ. ಯರನಾಳ, ವಿ. ಎಸ್. ಪಾಟೀಲ, ಬಸವರಾಜ ಪಾಟೀಲ, ಟಪಾಲ್ ಎಂಜಿನಿಯರ್, ಶಂಕರ ಚವ್ಹಾಣ, ಸುಜಾತಾ ಕಳ್ಳಿಮನಿ, ಶ್ರೀಶೈಲಗೌಡ ಪಾಟೀಲ ನಿಡೋಣಿ, ಗೀತಾಂಜಲಿ ಪಾಟೀಲ, ಡಾ. ಮೈಶಾಳ, ಕಾಂತಾ ನಾಯಕ, ಎಂ. ಎಸ್. ಲೋಣಿ, ಸೋಮನಾಥ ಕಳ್ಳಿಮನಿ, ವಿ. ಎಸ್. ಪಾಟೀಲ, ಈರಗೊಂಡ ಬಿರಾದಾರ, ಜಾಕೀರ ಬಾಗವಾನ, ಡಿ. ಎಲ್. ಚವ್ಹಾಣ, ಪ್ರಶಾಂತ ಝುಂಡೆ ಮುಂತಾದವರು ಉಪಸ್ಥಿತರಿದ್ದರು.

---

**ಇಂದು ಪದ್ಮಭೂಷಣ ದಿ ಡಾ.ರಾಜಕುಮಾರ ಅವರ ಜನ್ಮದಿನ (ಏ.24) ನಿಮಿತ್ತ ವಿಶೇಷ ಲೇಖನ**

# ಕನ್ನಡಕ್ಕೊಬ್ಬರೆ ನಟಸಾರ್ವಭೌಮ

**ಉದಯರಶ್ಮಿ ದಿನಪತ್ರಿಕೆ**

**ವೀಣಾಂತರಂಗ**



**-ವೀಣಾ ಎಚ್. ಪಾಟೀಲ್, ಮುಂಡರಗಿ**

ರಾಜಕುಮಾರ್ ಎಂದರೆ ಅಚ್ಚ ಬಿಳಿ ಬಣ್ಣದ ಪಂಚೆ ಮತ್ತು ಅಂಗಿ ಧರಿಸಿದ ಸರಳತೆ,ಮುಗ್ಧತೆ, ಪ್ರೀತಿ, ವಿಶ್ವಾಸ ಮತ್ತು ವಿನಯವೇ ಮೈವೆತ್ತಂತ ವ್ಯಕ್ತಿತ್ವದ ಸಂತ. ಯಾವುದೇ ಉಪಮಾನ ಉಪಮೇಯಗಳಿಗೆ ನಿಲುಕದ ಅದ್ಭುತ ರಸಗ್ರಹಿಕೆಯುಳ್ಳ ನವರಸಗಳನ್ನೊಳಗೊಂಡ ಲೀಲಾಜಾಲ ಅಭಿನಯದ ಸಾಕಾರ ಮೂರ್ತಿ.

ಕವಿರತ್ನ ಕಾಳಿದಾಸದ ಪೆದ್ದ ಕುರಿ ಕಾಯುವ ವ್ಯಕ್ತಿಯ ನಟನೆಯಿಂದ ಪ್ರಬುದ್ಧ ಪ್ರಕಾಂಡ ಪಂಡಿತನಾಗಿ ಪರಕಾಯ ಪ್ರವೇಶ ಮಾಡಿದಂತಹ ನಟನೆ ಇರಲಿ, ಯುವ ಜನರನ್ನು ಪ್ರೇರೇಪಿಸುವ ಜೀವನ ಚೈತ್ರ ಆಕಸ್ಮಿಕಗಳಂತಹ ಚಿತ್ರಗಳಿರಲಿ, ವಿನಯವೇ ಮೈವೆತ್ತ ಸಾಕ್ಷಾತ್ಕಾರ ಚಿತ್ರವಿರಲಿ, ತನ್ನಿಡಿ ಬದುಕನ್ನೇ ಹಾಳು ಮಾಡಿದ ದುಷ್ಕರ್ಮಿಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸಿದ ಗುರಿ ಚಲನಚಿತ್ರವಿರಲಿ,ಅವರಿಗೆ ಅವರೇ ಸಾಟಿ. ಪೌರಾಣಿಕ ಪಾತ್ರಗಳಲ್ಲಂತೂ ಅವರ ಅಂಗಸೌಷ್ಟವ, ಅಸ್ಖಲಿತ ಮಾತಿನ ಶೈಲಿ, ಅದ್ಭುತ ನಟನೆ ಹೋರಾಟದ ದೃಶ್ಯಗಳಲ್ಲಿನ ವೀರೋಚಿತ ಅಭಿನಯ, ಖಳ ನಟರೊಂದಿಗೆ ವ್ಯಂಗೋಕ್ತಿಗಳನ್ನು ಉದುರಿಸುವಾಗ ಅವರ ಬಾಡಿ ಲ್ಯಾಂಗ್ವೇಜ್ ಒಂದೇ ಎರಡೇ!!ಅವರನ್ನು ವರ್ಣಿಸಲು.... ಅಬ್ಬ ಎರಡು ಕಣ್ಣು ಸಾಲದು ಅವರ ಅಭಿನಯವನ್ನು ನೋಡಲು, ಎರಡು ಕಿವಿಗಳು ಸಾಲದು ಅವರ ಇಂಪಾದ ಗಾನಸುಧೆಯನ್ನು ಕೇಳಲು.

ಕೇವಲ ಭಾರತದಲ್ಲಲ್ಲ, ಇಡೀ ಜಗತ್ತಿನಾದ್ಯಂತ ಡಾಕ್ಟರ್ ರಾಜ್




ಅವರಂತಹ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ ಇನ್ನೋರ್ವ ನಟ ಇಲ್ಲ ಎಂದರೆ ಡಾಕ್ಟರ್ ರಾಜ್ ಅವರ ನಟನೆಯ ಆಳ, ಅಗಲ, ವ್ಯಾಪ್ತಿಯು ಅರಿವಾದೀತು ನಮಗೆ. ತಾವು ಅಭಿನಯಿಸಿದ ಸರಿ ಸುಮಾರು ಐದು ದಶಕಗಳಲ್ಲಿ ಮೂರು ಪೀಳಿಗೆಯ ಜನರಿಗೆ ಪ್ರೀತಿ, ಪ್ರೇಮ, ಸಹೋದರ ಭಾವ, ತ್ಯಾಗ, ವೈರಾಗ್ಯ ಅಕ್ಕರೆ ಮುಂತಾದ ಎಲ್ಲಾ ರಸಗಳನ್ನು ತಮ್ಮ ಚಲನಚಿತ್ರಗಳಲ್ಲಿ ಅಭಿನಯಿಸುವ ಮೂಲಕ ಬದುಕಿನ ಪಾಠ ಹೇಳಿಕೊಟ್ಟವರು ಡಾಕ್ಟರ್ ರಾಜ್.

ಅವರ ನಟನೆಯ ಬಂಗಾರದ ಮನುಷ್ಯ ಚಿತ್ರವನ್ನು ನೋಡಿದ ಸಾವಿರಾರು ಜನರು ನೌಕರಿ ಬಿಟ್ಟು ವ್ಯವಸಾಯಕ್ಕೆ ಇಳಿದರು. "ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ" ಎಂಬ ಅವರ ಹಾಡಿನ ಅಭಿನಯ ಲಕ್ಷಾಂತರ ಜನರನ್ನು ಪ್ರೇರೇಪಿಸಿ ಬದುಕಿನಲ್ಲಿ ಮುನ್ನಡೆಸಿತು.

ತಾವು ನಟಿಸಿದ ಚಲನಚಿತ್ರಗಳಲ್ಲಿ ಹೆಣ್ಣು ಮಕ್ಕಳಿಗೆ ಹೇಗೆ ಗೌರವ ಕೊಡಬೇಕು, ಪತ್ನಿಯನ್ನು ಪ್ರೀತಿಸುವ ರೀತಿ, ತಪ್ಪು ಮಾಡುವವರನ್ನು ಬುದ್ಧಿ ಹೇಳಿ ಬದಲಾಯಿಸುವ, ಬದಲಾಗದೆ ಹೋದಲ್ಲಿ ಬುದ್ಧಿ ಕಲಿಸುವ,ಮಕ್ಕಳಿಗೆ ಶಿಕ್ಷಣದ ಜೊತೆಗೆ ಶಿಷ್ಟಾಚಾರ ಗುರು ಹಿರಿಯರಲ್ಲಿ ತೋರುವ ವಿನಯ, ವಿಧೇಯತೆ, ಸತ್ಯಪರತೆ ಕರ್ತವ್ಯ ನಿಷ್ಠೆ ಹೀಗೆ ಭಾರತೀಯ ಸಂಸ್ಕೃತಿಯ ವಿವಿಧ ಮಗ್ಗಲುಗಳನ್ನು ಪಾಠವನ್ನೇ ಮಾಡದೆ ಕೇವಲ ತಾವು ಅಭಿನಯಿಸುವ ಚಲನಚಿತ್ರ ಮತ್ತು ನಟನೆಯು ಮೂಲಕ ಕಲಿಸಿದ ಅದ್ಭುತ ಗುರು ಡಾಕ್ಟರ್ ರಾಜ್. ಕೇವಲ ನಟನೆಯಲ್ಲಿ ಮಾತ್ರವಲ್ಲ ನಿಜ ಜೀವನದಲ್ಲಿಯೂ ಆತ ನುಡಿದಂತೆಯೇ ನಡೆದು ಬದುಕಿದ ಅದ್ಭುತ ಸಂತ.

ಬದುಕಿನ ಪ್ರತಿ ಗಳಿಗೆಯನ್ನು ಕೃತಜ್ಞತೆಯಿಂದ ಪ್ರೀತಿಯಿಂದ ವಿಶ್ವಾಸದಿಂದ ಬದುಕಿದವರು. ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ಬಸವಣ್ಣನವರ ಉಕ್ತಿಯಂತೆ ತಮಗಿಂತ ಅತ್ಯಂತ ಕಿರಿಯ ವ್ಯಕ್ತಿಯನ್ನು ಕೂಡ ಅತ್ಯಂತ ಗೌರವಯುತವಾಗಿ ಪ್ರೀತಿಯಿಂದ ನಡೆಸಿಕೊಂಡವರು. ಚಲನಚಿತ್ರಗಳಷ್ಟೇ ಅಲ್ಲದೆ, ಕಿರುತೆರೆಯ ನಟ ನಟಿಯರ ಅಭಿನಯವನ್ನು ಮೆಚ್ಚಿ ಹಾರೈಸಿದವರು ಅವರು. ಅವರ ಒಂದು ಪ್ರೀತಿಯ ಹಾರೈಕೆ ವಿಶ್ವ ಚಲನಚಿತ್ರರಂಗದ ಆಸ್ಕರ್ ಪ್ರಶಸ್ತಿಗಿಂತಲೂ ಮಿಗಿಲಾದದ್ದು ಎಂಬುದು ಅವರಿಂದ ಹಾರೈಸಲ್ಪಟ್ಟವರ ಅಂಬೋಣವಾಗಿ-ತ್ತು.

ತಮ್ಮ ನಿರ್ಮಾಪಕರನ್ನು ಅನ್ನಕ್ಕೆ ದಾರಿ ಮಾಡಿಕೊಟ್ಟ ದಣಿಗಳೆಂದೂ, ತಮ್ಮ ಅಭಿಮಾನಿಗಳನ್ನು ಅಭಿಮಾನಿ ದೇವರುಗಳು ಎಂದು ಗೌರವಿಸಿದವರು.



ಅವರ ಅಭಿನಯದ ಚಲನಚಿತ್ರ ಒಂದರ ಶೂಟಿಂಗ್ ತಮ್ಮ ಕಾಲೇಜಿನಲ್ಲಿ ನಡೆಯುತ್ತಿರುವಾಗ ಹಿಂದೆ ಕುಳಿತು ಶೂಟಿಂಗ್ ನೋಡುತ್ತಿದ್ದ ಪ್ರಕಾಂಡ ಪಾಂಡಿತ್ಯ ಉಳ್ಳ ಪ್ರೊಫೆಸರ್ ಒಬ್ಬರು ಖುದ್ದು ತಾವೇ ಡಾಕ್ಟರ್ ರಾಜ್ ರವರು ಶೇಕ್ಸಪಿಯರ್ ನ ಪಾಠವನ್ನು ಅಭಿನಯಿಸಿ ತೋರಿಸುವಾಗ ಅವರ ಧ್ವನಿಯಲ್ಲಿನ ಏರಿಳಿತ, ಇಂಗ್ಲೀಷ್ ಭಾಷೆಯ ಮೇಲಿನ ಅವರ ಹಿಡಿತ ಮತ್ತು ಅಭಿನಯ ಪ್ರತಿಭೆಯನ್ನು ಕಂಡು ಮಂತ್ರಮುಗ್ಧರಾದರಂತೆ.

ನಮಗೆ ಭಕ್ತ ಕುಂಬಾರ, ವಿಜಯನಗರದ ಅರಸ ಶ್ರೀ ಕೃಷ್ಣದೇವರಾಯ, ಬೇಡರ ಕಣ್ಣಪ್ಪ, ರಣಧೀರ ಕಂಠೀರವ, ಮಯೂರ, ಓಹಿಲೇಶ್ವರ, ಇಮ್ಮಡಿ ಪುಲಕೇಶಿ ಮುಂತಾದ ಪೌರಾಣಿಕ, ಐತಿಹಾಸಿಕ ಪುರುಷರ ಹೆಸರುಗಳನ್ನು ಕೇಳಿದಾಗ ಕಣ್ಣಮುಂದೆ ಬರುವ ಚಿತ್ರ ಕೇವಲ ಒಬ್ಬರದು ಅದು ಡಾ. ರಾಜ್.

ಪಾತ್ರವೇ ತಾನಾಗಿ ಪರಕಾಯ ಪ್ರವೇಶ ಮಾಡಿ ಅಭಿನಯಿಸಿದ ನಟಸಾರ್ವಭೌಮ ಡಾಕ್ಟರ್ ರಾಜ್ ಹುಟ್ಟಿದ್ದು ಚಾಮರಾಜಪೇಟೆ ಬಳಿಯ ಗಾಜನೂರಿನಲ್ಲಿ. ತಂದೆ ಪುಟ್ಟಸ್ವಾಮಯ್ಯ ಗುಬ್ಬಿ ನಾಟಕ ಕಂಪನಿಯಲ್ಲಿ ಅದ್ಭುತ ರೌದ್ರನಟರಾಗಿ ಅಭಿನಯಿಸುತ್ತಿದ್ದ ನಟ. ಪೂರ್ವ ಹೆಸರು ಮುತ್ತುರಾಜ್.ಕೇವಲ ನಾಲ್ಕನೇ ತರಗತಿಯವರೆಗೆ ಓದಿದ ಮುತ್ತುರಾಜ್ ಅವರ ವಿದ್ಯಾಭ್ಯಾಸ ಬಡತನ ಮತ್ತು ನಾಟಕವಾಡಲು ಊರಿಂದೂರಿಗೆ ವಲಸೆ ಹೋಗುವ ಕಾರಣ ಅಲ್ಲಿಗೇ ಮೊಟಕಾಗಿ ಮುಂದೆ ಗುಬ್ಬಿ ಕಂಪನಿಯಲ್ಲಿ ತಂದೆಯೊಂದಿಗೆ ಸಣ್ಣಪುಟ್ಟ ಪಾತ್ರಗಳಲ್ಲಿ ಅಭಿನಯಿಸಲು ಆರಂಭಿಸಿದರು.

ಮುತ್ತು ರಾಜ್ ಪೂರ್ಣ ಪ್ರಮಾಣದಲ್ಲಿ ನಟನಾಗಿ ಹೊರಹೊಮ್ಮಿದ್ದು ಭಕ್ತ ಅಂಬ-ರೀಶ ನಾಟಕದಲ್ಲಿ ಅಂಬರೀಶನ ತಮ್ಮ ರಮಾಕಾಂತನಾಗಿ. ತಂದೆಯಿಂದಲೇ ರಂಗ ತಾಲೀಮು ಪಡೆದ ಮುತ್ತುರಾಜ್ ತಂದೆಯ ಜೊತೆಗೆ ಕುರುಕ್ಷೇತ್ರ ನಾಟಕದಲ್ಲಿ ತಂದೆ ಭೀಮನಾಗಿಯೂ ಮಗ ಅರ್ಜುನನಾಗಿಯೂ ಪಾತ್ರ ನಿರ್ವಹಿಸಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ತಂದೆಯ ಆಶಯದಂತೆ ವಿವಾಹ ಮಾಡಿಕೊಂಡಿದ್ದ ಸೋದರ ಸಂಬಂಧಿ ಪಾರ್ವತಮ್ಮ ಡಾಕ್ಟರ್ ರಾಜ್ ಅವರ ಜೀವನದ ಚುಕ್ಕಾಣಿಯನ್ನು ಯಶಸ್ವಿಯಾಗಿ ಮುಂದೆ ಸಾಗಿಸಿದ ಅದ್ಭುತ ವ್ಯಕ್ತಿ.

ತಂದೆಯ ಸಾವಿನ ನಂತರ ಗುಬ್ಬಿ ಕಂಪನಿ ಅಲ್ಲದೆ ಶೇಷ ನಾಟಕ ಮಂಡಳಿ, ಶ್ರೀ ಸಾಹಿತ್ಯ ನಾಟಕ ಮಂಡಳಿಗಳಲ್ಲಿಯೂ ಕೂಡ ಕಾರ್ಯನಿರ್ವಹಿಸಿದರು ಮುತ್ತುರಾಜ್.

ಈಗಾಗಲೇ ಭಕ್ತ ಪ್ರಹ್ಲಾದ ಚಿತ್ರದಲ್ಲಿ ಬಾಲ ನಟನಾಗಿ ಶ್ರೀನಿವಾಸ ಕಲ್ಯಾಣದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬರಾಗಿ ಚಿತ್ರರಂಗಕ್ಕೆ ಬಂದು ನಟಿಸಿದ ಮುತ್ತುರಾಜ್ ಮುಂದೆ ನಿರ್ದೇಶಕ ಎಚ್.ಎಲ್.ಎನ್. ಸಿಂಹ ಅವರ ಕಣ್ಣಿಗೆ ಬಿದ್ದು ಅವರ ಮೂಲಕ ಬೇಡರ ಕಣ್ಣಪ್ಪ ಚಲನಚಿತ್ರ ತಯಾ-ರಿಸಲು ಮುಂದಾದ ನಿರ್ಮಾಪಕ ಎವಿಎಂನ ಚೆಟ್ಟಿಯಾರ ಮತ್ತು ಮತ್ತು ಸಹ ನಿರ್ಮಾಪಕರಾದ ಗುಬ್ಬಿ ವೀರಣ್ಣನವರ ಸಹಮತಿಯ ಮೇರೆಗೆ ಮುತ್ತುರಾಜ್.... ರಾಜ-ಕುಮಾರನೆಂಬ ಹೆಸರಿನಿಂದ ಬೇಡರ ಕಣ್ಣಪ್ಪ ಚಲನಚಿತ್ರದಲ್ಲಿ ಅಭಿನಯಿಸಿದರು. ಕಟ್ಟುಮಸ್ತಾದ ದೇಹ ಸೌಷ್ಟವ, ಅದ್ಭುತ ಅಭಿನಯ ಪ್ರತಿಭೆ ಪ್ರೇಕ್ಷಕರ ಮನಸೆಳೆಯಿತು. ಮುಂದೆ ಒಂದೊಂದೇ ಚಲನಚಿತ್ರಗಳಲ್ಲಿ ಅಭಿನಯಿಸಲು ಆರಂಭಿಸಿದ ರಾಜ್ ಹಿಂತಿರುಗಿ ನೋಡಿದ್ದೇ ಇಲ್ಲ.

ಮದರಾಸಿನಲ್ಲಿ ಮನೆ ಮಾಡಿದ ರಾಜ್ ಅವರ ಜನಪ್ರಿಯತೆ



ಇಡೀ ಕರ್ನಾಟಕದಾದ್ಯಂತ ಸಂಚಲನವನ್ನು ಸೃಷ್ಟಿ ಮಾಡಿತ್ತು. ಅವರ ಅಭಿನಯದ ಚಲನಚಿತ್ರಗಳು ಅದ್ಭುತ ಯಶಸ್ಸನ್ನು ಗಳಿಸುತ್ತಿದ್ದವು. ಆದಾಗ್ಯೂ ಸರಿಯಾದ ಮಟ್ಟದ ಸಂಭಾವನೆ ದೊರೆಯುತ್ತಿರಲಿಲ್ಲ. ಇದನ್ನು ಮನಗಂಡ ರಾಜ್ ಅವರ ಸಹೋದರ ವರದರಾಜ್ ಮತ್ತು ರಾಜ ಅವರ ಪತ್ನಿ ಪಾರ್ವತಮ್ಮ ಅವರು ತಮ್ಮದೇ ಆದ ಚಿತ್ರ ನಿರ್ಮಾಣ ಸಂಸ್ಥೆ ವಜ್ರೇಶ್ವರಿ ಕಂಬೈನ್ಸನ್ನು ಪ್ರಾರಂಭಿಸಿದರು.

ಮುಂದೆ ಪೂರ್ಣಿಮಾ ಎಂಟರ ಪ್ರೈಸಸ್ ಎಂಬ ಸಂಸ್ಥೆಯನ್ನು ಕೂಡ ಸ್ಥಾಪಿಸಿದ ಅವರು ನಿರ್ಮಾಪಕರಾಗಿ ಕಾರ್ಯನಿರ್ವಹಿಸಿದರು. ಕನ್ನಡದ ಅತ್ಯುತ್ತಮ ಕಾದಂಬರಿಗಳನ್ನು ಚಲನಚಿತ್ರವಾಗಿಸಿದ ಕೀರ್ತಿ ಪಾರ್ವತಮ್ಮ ರಾಜಕುಮಾರ ಅವರದು.

ಕೇವಲ ಚಲನಚಿತ್ರಗಳಲ್ಲಿ ಮಾತ್ರ ಹೋರಾಟ ಮಾಡುವ ಅಭಿನಯ ಮಾಡದೆ, ಕರ್ನಾಟಕದಲ್ಲಿ ಕನ್ನಡದ



ಉಳಿಕೆಗಾಗಿ ಗೋಕಾಕ್ ವರದಿಯನ್ನು ಜಾರಿಗೊಳಿಸಲು ಒತ್ತಾಯಿಸಿ ಇಡೀ ಕರ್ನಾಟಕದಾದ್ಯಂತ ಸಾಹಿತಿಗಳ,ಕನ್ನಡ ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ ಹಿರಿಯಾಳುಗಳ ಜೊತೆಗೆ ಇಡೀ ಕರ್ನಾಟಕವನ್ನು ಸುತ್ತಿ ಜನಜಾಗೃತಿ ಮೂಡಿಸಿದವರು ರಾಜ್. ತಾವು ಸ್ವತಃ ಈಡಿಗ ಸಮುದಾಯಕ್ಕೆ ಸೇರಿದ್ದರೂ ಯಾವುದೇ ಮದ್ಯ ತಯಾರಿಸುವ ಫ್ಯಾಕ್ಟರಿಗಳ ಉದ್ಘಾಟನೆಗಾಗಲಿ, ರಿಟೇಲ್ ಮಾರಾಟ ಕೇಂದ್ರಗಳ ಉದ್ಘಾಟನೆಗಾಗಲಿ ಎಂದು ಹೋಗಲಿಲ್ಲ. ನುಡಿದಂತೆ ನಡೆದ ಅವರು ನಡೆದ ಹಾದಿ ಮುಂದಿನ ತಲೆಮಾರಿನ ಎಲ್ಲ ನಟರಿಗೆ ರಾಜ್ ಮಾರ್ಗವಾಗಿದೆ.

ರಂಗಭೂಮಿಯಿಂದ ಬಂದ ಕಾರಣ ಅದ್ಭುತ ಕಂಠ ಸಿರಿಯನ್ನು ಹೊಂದಿದ್ದ ರಾಜ್ ಶಾಸ್ತ್ರೀಯವಾಗಿ ಸಂಗೀತವನ್ನು ಕಲಿಯದಿದ್ದರೂ ಉತ್ತಮ ಗಾಯಕರೂ ಹೌದು. ಭಾರತೀಯ ಚಲನಚಿತ್ರ ರಂಗದಲ್ಲಿ ನಟನೆ ಮತ್ತು ಗಾಯನ ಎರಡಕ್ಕೂ ರಾಷ್ಟ್ರಪ್ರಶಸ್ತಿ ಪಡೆದ ಏಕಮೇವಾದ್ವಿತೀಯ ನಟ ರಾಜ ಕುಮಾರ್. ನಟನೆಗಾಗಿ ಹಲವಾರು ರಾಷ್ಟ್ರಪ್ರಶಸ್ತಿಗಳನ್ನು ಪಡೆದ ರಾಜ್ ಅವರು ತಮ್ಮ ನಟನೆಯ ಜೀವನ ಚೈತ್ರ ಚಿತ್ರದಲ್ಲಿನ "ನಾದಮಯ ಈ ಲೋಕವೆಲ್ಲ" ಎಂಬ ಹಾಡಿಗೆ ಧ್ವನಿ ನೀಡಿದ್ದು ಆ ಹಾಡಿಗೆ ಅವರಿಗೆ ರಾಷ್ಟ್ರಮಟ್ಟದ ಅತ್ಯುನ್ನತ ಗಾಯಕ ಪುರಸ್ಕಾರ ಲಭ್ಯವಾಗಿದೆ.

ಕನ್ನಡದಲ್ಲಿ ಸುಮಾರು ಇನ್ನೂರಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ ರಾಜಕುಮಾರ ಅವರಿಗೆ ಸಿಕ್ಕ ಪ್ರಶಸ್ತಿ ಪುರಸ್ಕಾರಗಳು ಹತ್ತು ಹಲವು.

* ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಮತ್ತು ನಟಸಾರ್ವಭೌಮ ಪ್ರಶಸ್ತಿ ಪಡೆದ ಅವರು,

*ರಾಷ್ಟ್ರದ ಅತ್ಯುನ್ನತ ಗೌರವವಾದ ಪದ್ಮಭೂಷಣ ಪ್ರಶಸ್ತಿಯನ್ನು ಪಡೆದಿದ್ದಾರೆ. *ಭಾರತೀಯ ಚಲನಚಿತ್ರ ರಂಗದ ಅತಿ ದೊಡ್ಡ ಪ್ರಶಸ್ತಿಯಾದ ದಾದಾಸಾಹೇಬ್ ಫಾಲ್ಕೆ ಪುರಸ್ಕಾರವನ್ನು ಪಡೆದಿದ್ದಾರೆ.

* ಹಂಪಿ ವಿಶ್ವವಿದ್ಯಾಲಯವು ಇವರನ್ನು ನಾಡೋಜ ಪುರಸ್ಕಾರ ನೀಡಿ ಗೌರವಿಸಿದೆ. *ಕರ್ನಾಟಕ ಸರ್ಕಾರದ ಕರ್ನಾಟಕ ರತ್ನ ಪ್ರಶಸ್ತಿ ಕೂಡ ಇವರ ಮಡಿಲಿಗೆ ಬಿದ್ದಿದೆ.

ತಮ್ಮ ಜೀವನದ ಮಧ್ಯಕಾಲದಲ್ಲಿ

ಯೋಗಾಭ್ಯಾಸವನ್ನು ಪ್ರಾರಂಭಿಸಿದ ಇವರು ಜೀವಿತದ ಕೊನೆಯವರೆಗೂ ಅದನ್ನು ಮುಂದುವರಿಸಿಕೊಂಡು ಬಂದರು. ಅವರ ನಾಯಕತ್ವದ ಚಲನಚಿತ್ರ ಒಂದರಲ್ಲಿ ಆರಂಭದ ದೃಶ್ಯಗಳಲ್ಲಿ ಅವರ ಯೋಗಾಭ್ಯಾಸದ ಚಿತ್ರೀಕರಣವಿದೆ.

ಮುಂದೆ 2000ನೇ ಇಸವಿಯಲ್ಲಿ ಕುಖ್ಯಾತ ಕಾಡುಗಳ್ಳ, ದಂತ ಚೋರ ವೀರಪ್ಪನ್ ಡಾಕ್ಟರ್ ರಾಜರನ್ನು ಗಾಜನೂರಿನ ಅವರ ತೋಟದ ಮನೆಯಿಂದ ಅಪಹರಿಸಿ ಸರಿಸುಮಾರು 108 ದಿನಗಳ ಕಾಲ ತನ್ನ ವಶದಲ್ಲಿ ಇಟ್ಟುಕೊಂಡನು. ಮುಂದೆ ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳ ಸತತ ಪ್ರಯತ್ನದಿಂದ ಬಿಡುಗಡೆ ಮಾಡಿದನು.

100ನೇ ಚಿತ್ರವಾಗಿ ಭಾಗ್ಯದ ಬಾಗಿಲು ತೆರೆಕಂಡರೆ ಇವರ 150ನೇ ಚಿತ್ರವಾಗಿ ಗಂಧದ ಗುಡಿ ಅರಣ್ಯ ಇಲಾಖೆಯವರ ಕಾರ್ಯವೈಖರಿ ಮತ್ತು ಕಾಡುಗಳ ಉಳಿಸುವಿಕೆಯ ಕುರಿತಾದ ಮೊಟ್ಟಮೊದಲ ಭಾರತೀಯ ಚಲನಚಿತ್ರವಾಗಿ ಹೊರಹೊಮ್ಮಿತು. ಹಲವಾರು ನಾಯಕಿಯರೊಂದಿಗೆ ತೆರೆ ಹಂಚಿಕೊಂಡ ಡಾಕ್ಟರ್ ರಾಜ್ ಅವರ ಸಹೋದ್ಯೋಗಿಗಳಾಗಿ ವಜ್ರಮುನಿ, ಸುಂದರ ಕೃಷ್ಣ ಅರಸ್, ನರ ಸಿಂಹರಾಜು, ಬಾಲಕೃಷ್ಣ, ತೂಗುದೀಪ ಶ್ರೀನಿವಾಸ್, ವಿಷ್ಣುವರ್ಧನ್ ಅನಂತ್ ನಾಗ್ ಅಂಬರೀಷ್, ಶಂಕರ್ ನಾಗ್ ಮುಂತಾದವರು ಕಾರ್ಯನಿರ್ವಹಿಸಿದರು. ಶಂಕರ್ ನಾಗ್ ನಿರ್ದೇಶನದ ಒಂದು ಮುತ್ತಿನ ಕಥೆ ಚಿತ್ರದಲ್ಲಿಯೂ ಕೂಡ ಇವರು ಅಭಿನಯಿಸಿದರು. ಮುಂದೆ ಕನ್ನಡ ಚಿತ್ರರಂಗದಲ್ಲಿ ಅಣ್ಣಾವ್ರು ಎಂದು ಗುರುತಿಸಿಕೊಂಡ ಡಾಕ್ಟರ್ ರಾಜ್ ಇಡೀ ಕನ್ನಡ ಚಿತ್ರರಂಗದ ಮೇರು ನಟನಾಗಿ ಹಿರಿಯ ಕಲಾವಿದರಾಗಿ ಉಳಿದೆಲ್ಲ ಕಲಾವಿದರಿಗೆ ಮೇಲ್ಪಂಕ್ತಿಯಾಗಿ ನಿಂತರು. ಪತ್ನಿ ಪಾರ್ವತಮ್ಮ ರಾಜಕುಮಾರ್ ಅವರ ಮೂಲಕ ಹಲವಾರು ನಟ ನಟಿಯರನ್ನು ಬೆಳಕಿಗೆ ತಂದ ಅವರು ಸ್ವತಹ ತಮ್ಮ ಮಕ್ಕಳಲ್ಲಿ ಮೂರು ಜನ ಗಂಡು ಮಕ್ಕಳನ್ನು ಚಿತ್ರರಂಗಕ್ಕೆ ಕೊಡುಗೆಯಾಗಿ ನೀಡಿದರು. ಹಿರಿಯ ಪುತ್ರಿಯನ್ನು ಸೋದರ ಸಂಬಂಧಿ ಗೋವಿಂದರಾಜ ಅವರಿಗೆ ಮದುವೆ ಮಾಡಿಕೊಟ್ಟರೆ ಮತ್ತೋರ್ವ ಪುತ್ರಿ ಪ್ರೇಮದ ಕಾಣಿಕೆ ಎಂಬ ಚಲನಚಿತ್ರದಲ್ಲಿ ಇವರೊಂದಿಗೆ ನಟಿಸಿದ್ದಾರೆ. ಮೈಸೂರಿನಲ್ಲಿ ಶಕ್ತಿಧಾಮ ಎಂಬ ಹೆಣ್ಣು ಮಕ್ಕಳ ಆಶ್ರಯಧಾಮವನ್ನು ಸ್ಥಾಪಿಸಿರುವ ಅವರು ಅಲ್ಲಿ ನೂರಾರು ಹೆಣ್ಣು ಮಕ್ಕಳಿಗೆ ಆಶ್ರಯ ನೀಡಿದ್ದಾರೆ, ಅದು ಇಂದಿಗೂ ನಡೆದುಕೊಂಡು ಬಂದಿದೆ.




ಪೌರಾಣಿಕ , ಧಾರ್ಮಿಕ, ಭಕ್ತಿ ಪ್ರಧಾನ,ಬಾಂಡ್, ಸಾಮಾಜಿಕ ಮತ್ತು ಐತಿಹಾಸಿಕ ಚಿತ್ರಗಳೇ ಆಗಿರಲಿ ಅಲ್ಲಿ ಅಣ್ಣಾವ್ರ ಛಾಪು ಒಡಮೂಡಲೇಬೇಕು. ಅಣ್ಣಾವ್ರ ಗಾಯನದ ಧ್ವನಿಮುದ್ರಿತ ಕ್ಯಾಸೆಟ್ಗಳು ಇಂದಿಗೂ ಮನೆ ಮನೆಯಲ್ಲಿ ಅನುರಣಿಸುತ್ತವೆ.

2006 ಏಪ್ರಿಲ್ 12ರಂದು ವಯೋ ಸಹಜವಾಗಿ ಉಂಟಾದ ಹೃದಯಾಘಾತದಿಂದ ಡಾಕ್ಟರ್ ರಾಜ್ ಅವರು ಇಹಲೋಕವನ್ನು ತ್ಯಜಿಸಿದರು. ರಾಜಕುಮಾರ ಅವರು ಕಣ್ಮರೆಯಾಗಿ ಇಲ್ಲಿಗೆ 18 ವರ್ಷಗಳು ಸಂದಿದ್ದರೂ ಇಂದಿಗೂ ಕನ್ನಡಿಗರ ಮನೆ ಮನಗಳಲ್ಲಿ ಅಜರಾಮರರಾಗಿದ್ದಾರೆ.

ಕನ್ನಡದ ನಾಡು-ನುಡಿಗೆ ತಮ್ಮ ಜೀವನವನ್ನು ಮುಡುಪಾಗಿಟ್ಟ, ಕನ್ನಡದ ನೆಲ ಜಲ ಸಂಸ್ಕೃತಿಗಳ ರಕ್ಷಣೆಗೆ ಅಪಾರ ಕೊಡುಗೆ ನೀಡಿದಂತಹ ಅಣ್ಣಾವ್ರು ವಿರಳಾತಿವಿರಳರಲ್ಲಿ ಒಬ್ಬರು. ಅಂತಹ ಮಹಾನ್ ಚೇತನದ ಹುಟ್ಟುಹಬ್ಬದ ಈ ದಿನ ಮತ್ತೊಮ್ಮೆ ಅವರನ್ನು ನೆನೆಯುತ್ತಾ ಮತ್ತೆ ಮತ್ತೆ ಕನ್ನಡ ನೆಲದಲ್ಲಿ ಹುಟ್ಟಿ ಬನ್ನಿ ಎಂದು ಆಶಿಸುವ..

